# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI





**ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003**

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ-10 Reg. No. : KARBIL/2005/16123 ಏಪ್ರಿಲ್ - 2021 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ - 4 ಪ್ರಕಟಣೆ : 10-04-2021



● e-mail : jnanashakthisss@gmail.com ● whatsapp : 7795116598 ● Mobile : 9343361618


## ‘ಶ್ರೀ ಸುಬ್ರಹ್ಮಣ್ಯ ಸಭಾದಿಂದ ಸಾಧಕರಿಗೆ ಸನ್ಮಾನ’
## ಬ್ರಾಹ್ಮಣರ ಒಗ್ಗಟ್ಟು ಇಂದಿನ ಅವಶ್ಯಕತೆ – ಶ್ರೀ ಸಚ್ಚಿದಾನಂದ ಮೂರ್ತಿ




ತ್ರಿಮತಸ್ಥ ಬ್ರಾಹ್ಮಣರು ಒಗ್ಗಟ್ಟಾಗಿದ್ದು ಸರಕಾರದ ವಿವಿಧ ಯೋಜನೆಗಳ ಸದುಪಯೋಗ ಪಡೆಯಬೇಕು ಮತ್ತು ತಮ್ಮ ಹಕ್ಕಿನ ಅವಶ್ಯಕತೆಗಳಿಗೆ ಸರಕಾರದ ಗಮನ ಸೆಳೆಯಲು ಸಫಲರಾಗಬೇಕು ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಸಚ್ಚಿದಾನಂದ ಮೂರ್ತಿಗಳು ಬ್ರಾಹ್ಮಣರಿಗೆ ಕರೆ ನೀಡಿದರು. ಶ್ರೀ ಸುಬ್ರಹ್ಮಣ್ಯ ಸಭಾದ ಅಪೂರ್ವ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಸ್ಥಾನಿಕ ಬ್ರಾಹ್ಮಣ ಸಮಾಜವು ಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಕಳೆದ 112 ವರ್ಷಗಳಿಂದ ಬ್ರಾಹ್ಮಣ ಸಮಾಜದ 140ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅತೀ ಕನಿಷ್ಠ ಬೆಲೆಯಲ್ಲಿ ವಸತಿ ವ್ಯವಸ್ಥೆಯನ್ನು ಮಾಡುತ್ತಿದ್ದು ಇದೀಗ ಪುತ್ತೂರಿನ ‘ಶಿವಸದನ’ದಲ್ಲಿ ಹಿರಿಯ ನಾಗರಿಕರ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಸತಿನಿಲಯವನ್ನು ಸ್ಥಾಪಿಸಿದೆ. ಅಷ್ಟೇ ಅಲ್ಲದೆ ಸುಬ್ರಹ್ಮಣ್ಯ ಸಹಕಾರ ಸಂಘವು 8 ಶಾಖೆಗಳ ಮೂಲಕ ಸರ್ವರ ಅವಶ್ಯಕತೆಗಳನ್ನು ಪೂರೈಸುವ ಕಾರ್ಯವನ್ನು ಮಾಡುತ್ತಿದೆ. ನಮ್ಮ ಮಂಡಳಿಯ ವತಿಯಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಾ ಬ್ರಾಹ್ಮಣರ ಏಳಿಗೆಗೆ ನಾವೆಲ್ಲರೂ ಪ್ರಯತ್ನಿಸೋಣ ಎಂದು ನುಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆಯವರು ವಹಿಸಿಕೊಂಡಿದ್ದರು. ಮಂಗಳೂರು ಮಹಾನಗರ ಪಾಲಿಕೆಯ ಉಪಮೇಯರ್ ಶ್ರೀಮತಿ ಸುಮಂಗಲ ರಾವ್ ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ದ್ವಿತೀಯ ರ್‍ಯಾಂಕ್ ವಿಜೇತೆ ಕುಮಾರಿ ನಿಧಿ ರಾವ್‌ರವರನ್ನು ಸನ್ಮಾನಿಸಲಾಯಿತು. ಶಾರದಾಂಬಾ ಭಜನಾ ಮಂಡಳಿಯವರ ಭಜನಾ ಕಾರ್ಯಕ್ರಮದ ಬಳಿಕ ಪ್ರಾರ್ಥನೆಯನ್ನು ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ನಡೆಸಿದರು. ಬ್ರಹ್ಮಶ್ರೀ ಪ್ರತಾಪ್ ಶರ್ಮರು ವೇದಘೋಷ ಪಠಿಸಿದರೆ, ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳು ಆಶೀರ್ವಚನ ನೀಡಿದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಸರ್ವರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಉಪಮೇಯರ್ ಶ್ರೀಮತಿ ಸುಮಂಗಲ ರಾವ್, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಶ್ರೀ ಶಿವರಾಂ ಉಡುಪ, ಶ್ರೀ ಪವನ ಕುಮಾರ್ ಆಸೀನರಾಗಿದ್ದರು. ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ವಲ್ಲಿ ಜ್ಞಾನೇಶ್ ಸನ್ಮಾನಿತರ ಪರಿಚಯ ಮಾಡಿದರು. ಶ್ರೀ ಸಭಾದ ಉಪಾಧ್ಯಕ್ಷರಾದ ಡಾ. ಎ. ಪಿ. ಕೃಷ್ಣ ಧನ್ಯವಾದ ನೀಡಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು.

**ಚಿತ್ರ : ಶ್ರೀ ರಘುವೀರ್ ಪೆರ್ಡೂರು**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು, ಬಿಜೈ ರಸ್ತೆ, ಮಂಗಳೂರು

**ಸಮಾಜ ಬಾಂಧವರೇ,**

ದಿನಾಂಕ **18-04-2021**ನೇ ರವಿವಾರದಂದು ಶ್ರೀ ಸಭಾದ ವತಿಯಿಂದ
ಶ್ರೀ ಶ್ರೀ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ
**ವರ್ಧಂತ್ಯುತ್ಸವ ಹಾಗೂ ಶ್ರೀ ರಾಮನವಮಿ ಕಾರ್ಯಕ್ರಮಗಳನ್ನು**
ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಆಚರಿಸಲಾಗುವುದು.
ಆ ಪ್ರಯುಕ್ತ



**‘ಸಾಮೂಹಿಕ ಲಕ್ಷ ಕುಂಕುಮಾರ್ಚನೆ’**



ಮತ್ತು ಶ್ರೀರಾಮ ದೇವರಿಗೆ ಅಭಿಷೇಕ ಹಾಗೂ ಕಲ್ಪೋಕ್ತ ಪೂಜೆ ನಡೆಯಲಿದೆ.
ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಸರ್ವ ಸದಸ್ಯರು**

7-30ರಿಂದ 8-30 :
ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ

8-30ರಿಂದ 9-15 : ಉಪಾಹಾರ

9-15ರಿಂದ 11-30 :
ಲಲಿತ ಸಹಸ್ರನಾಮದಿಂದ ಸಾಮೂಹಿಕ ಲಕ್ಷ ಕುಂಕುಮಾರ್ಚನೆ

11-30ರಿಂದ :
ಶ್ರೀರಾಮ ದೇವರಿಗೆ ಅಭಿಷೇಕ ಮತ್ತು ಕಲ್ಪೋಕ್ತ ಪೂಜೆ

12-30ಕ್ಕೆ : ಮಂಗಳಾರತಿ

1-00ಕ್ಕೆ :
ಪ್ರಸಾದ ವಿತರಣೆ ಮತ್ತು ಪ್ರಸಾದ ಭೋಜನ



- ಉತ್ಸಾಹಿಗೆ ಎಲ್ಲವೂ ಸುಲಭವೆಂದೇ ಅನುಭವಕ್ಕೆ ಬರುತ್ತದೆ. – *ರಿಚರ್ಡ್*
- ಮನುಷ್ಯನು ತನ್ನ ಜೀವನವನ್ನು ಎಷ್ಟು ಸಂಕುಚಿತಗೊಳಿಸಿದರೆ ಅದು ಅಷ್ಟು ಬಡವಾಗುತ್ತದೆ. – *ಗೋಪಾಲಕೃಷ್ಣ ಅಡಿಗ*

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
ಎಂ. ಎಸ್. ರಘುನಾಥ ರಾವ್
ಪುತ್ತೂರು
ಮೊಬೈಲ್ : 9448481696


ಸಂಪಾದಕರು :
ಪಿ. ಶ್ರೀಕಾಂತ ರಾವ್
ಮೊಬೈಲ್ : 9343361618

ಸಂಪಾದಕ ಮಂಡಳಿ :
ನಾಗರಾಜ್ ವರ್ಕಾಡಿ
ರಘುವೀರ್ ಪೆರ್ಡೂರು
ಟಿ. ಬಿ. ಮೋಹನ್ ರಾವ್
ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
ಕರುಣ್ ರಾವ್ ಬೆಳ್ಳೆ
ಅನಿಲ್ ರಾವ್ ಬಿ.ಎಸ್.

ಗೌರವ ಸಲಹೆಗಾರರು :
ಚೇತನ್ ಶರ್ಮ
ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
ಹರ್ಷಕುಮಾರ್ ಕೇದಿಗೆ



## ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಅನುಗ್ರಹ ಸಂದೇಶ

ಮನುಷ್ಯನು ಧರ್ಮಮಾರ್ಗ ಪ್ರವೃತ್ತನಾಗಿರುವುದು ಬಹುಮುಖ್ಯವಾದ ವಿಷಯವಾಗಿದೆ. ವಿದ್ಯಾಭ್ಯಾಸ ಹಾಗೂ ಉದ್ಯೋಗ, ಧರ್ಮಮಾರ್ಗದಲ್ಲಿಯೇ ನಡೆಯಬೇಕು. ಸತ್ಯವಾಕ್ಯ ಪರಿಪಾಲನೆ, ಆಲೋಚನೆ ಮತ್ತು ಕರ್ತವ್ಯಗಳು ಸದುದ್ದೇಶದಿಂದ ಕೂಡಿರುವುದು, ಎಲ್ಲರೊಡನೆ ಸಹಬಾಳ್ವೆಯನ್ನು ನಡೆಸುತ್ತಾ ಸೇವಾಮನೋಭಾವದಿಂದ ಇರುವುದು ಮುಖ್ಯವಾಗಿರುತ್ತದೆ.

ಜೀವನದಲ್ಲಿ ಇಂತಹ ಸಾಮಾನ್ಯ ಧರ್ಮವನ್ನು ಆಚರಣೆಯಲ್ಲಿ ಇಟ್ಟುಕೊಂಡರೆ ಅಂಥವರ ಜೀವನವು ಪುಣ್ಯಪ್ರದವಾಗಿರುತ್ತದೆ. ಅಂಥವರು ಎಲ್ಲರಿಗೂ ಪ್ರೀತಿಪಾತ್ರರಾಗಿರುತ್ತಾರೆ. ಸದ್ವರ್ತನೆಯ ವ್ಯಕ್ತಿಯ ಜೀವನದಲ್ಲಿ ಅನಿರೀಕ್ಷಿತವಾಗಿ ತೊಂದರೆಗಳು ಉದ್ಭವಿಸಿದರೆ, ಅನೇಕ ಜನರು ಆ ವ್ಯಕ್ತಿಯ ಸಹಾಯಕ್ಕೆ ಧಾವಿಸಿ ಬರುತ್ತಾರೆ.

ಎಂಥಹ ಕಠಿಣ ಪರಿಸ್ಥಿತಿಗಳು ಎದುರಾದರೂ, ಮನುಷ್ಯನು ಧರ್ಮಮಾರ್ಗದಿಂದ ವಿಚಲಿತನಾಗಬಾರದು. ಅಧರ್ಮ ಮಾರ್ಗವು ಪ್ರಾರಂಭದಲ್ಲಿ ಸುಲಭವೂ, ಆಕರ್ಷಣೀಯವಾಗಿಯೇ ಕಂಡರೂ ಅಂತ್ಯದಲ್ಲಿ ಅದು ವಿನಾಶಕ್ಕೆ ಹೇತುವಾಗುತ್ತದೆ. ಆದ್ದರಿಂದ ಎಂತಹ ಸಂದರ್ಭದಲ್ಲಿಯೂ ಮನಸ್ಸು ಅಧರ್ಮಕ್ಕೆ ಸೋಲಬಾರದು.

**ನ ಸೀದನ್ನಪಿ ಧರ್ಮೇಣ ಮನೋ ಧರ್ಮೇ ನಿವೇಶಯೇತ್ ।**
**ಅಧಾರ್ಮಿಕಾಣಾಂ ಪಾಪಾನಾಮಾಶು ಪಶ್ಯನ್ ವಿಪರ್ಯಯಮ್ ॥**

ಹರಿಶ್ಚಂದ್ರ ಮುಂತಾದವರ ಜೀವನವನ್ನು ಕಂಡಾಗ ಎಂತಹ ಕಠಿಣ ಪರೀಕ್ಷೆ ಸಂದರ್ಭಗಳಲ್ಲಿಯೂ ಅವರು ಧರ್ಮಮಾರ್ಗವನ್ನು ತ್ಯಜಿಸದೇ ಇರುವುದನ್ನು ಕಾಣುತ್ತೇವೆ. ಆದುದರಿಂದಲೇ ಅವರು ವಿಖ್ಯಾತ ವ್ಯಕ್ತಿಗಳಾದರು.

ಆದ್ದರಿಂದ ಸರ್ವರೂ ಧರ್ಮಮಾರ್ಗ ಪ್ರವೃತ್ತರಾಗಿರುವುದು ಅತ್ಯಂತ ಅವಶ್ಯಕವಾಗಿದೆ.

**ಕೃಪೆ : 'ಶ್ರೀ ಶಂಕರ ಕೃಪಾ'**

### 2020-21ನೇ ಸಾಲಿನ ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ವತಿಯಿಂದ ವಿತರಿಸಿದ ವಿದ್ಯಾರ್ಥಿವೇತನ (Scholarship)

| Sl. No. | Course | Number of Students | Amount | Total Amount |
|---|---|---|---|---|
| 01 | Standard 1 to 7 | 13 | 1,000/- | 13,000/- |
| 02 | Standard VIII to X | 18 | 2,000/- | 36,000/- |
| 03 | First PUC | 22 | 2,500/- | 55,000/- |
| 04 | Second PUC | 34-1=33 | 2,500/- | 82,500/- |
| 05 | B.Com. | 34-1=33 | 5,000/- | 1,65,000/- |
| 06 | B.Sc. | 18 | 5,000/- | 90,000/- |
| 07 | BA / BCA / LLB | 13 | 5,000/- | 65,000/- |
| 08 | CA | 02 | 7,500/- | 15,000/- |
| 09 | MBBS | 01 | 7,500/- | 7,500/- |
| | Donor to Student Scheme | 86 Students = 1,84,000/-<br>3 Students = 22,500/-88 Students - Total = 2,09,000/-<br>General Scholarship 64 Students Rs. 3,20,000/- | | |
| 10 | Sponsorship of one years education to Ananya V. R., D/o. Indira, Mudigere<br>By Ankitha Ananthapura, USA, I B. Com. Student Rs. 25,000/- | | | |
| 11 | Sponsorship of one Student for training at TIME for Bank Examinations,<br>Shivaprasad, Sponsored by D. R. Belle, Mangalore 1 Student Rs. 14,500/- | | | |
| 12 | Nakul, Shri Shringeri Sharadapeeta Veda Adyayana Kendra,<br>Shringeri, Dr N. V. Upadyaya Fund | 1 Student | Rs. | 10,000/- |
| | 91 Students Rs. 2,58,500/- | 156 Students | Rs. | 5,78,500/- |
| 13 | Loan Covid 19 | Students 18 | Rs. | 11,74,750/- |
| | | Loan Students 46 | Rs. | 41,05,000/- |
| | Loan Grand Total 64 Students Amount | | Rs. | 52,79,750/- |
| | **Total Students 220** | | **Total : Rs.** | **58,58,250/-** |

## ಕೌಶಲವನ್ನು ವೃದ್ಧಿಸಿಕೊಳ್ಳಿ

ನೀವು ಯಾವುದೇ ಕ್ಷೇತ್ರದಲ್ಲೇ ಕೆಲಸ ಮಾಡುತ್ತಿರಲಿ. ದಿನಕ್ಕೆ ಎಷ್ಟು ಹೊತ್ತು ಆ ಕೆಲಸದಲ್ಲಿ ಶ್ರಮ ಹಾಕುತ್ತೀರಿ ಎನ್ನುವುದಕ್ಕಿಂತ ಮುಖ್ಯವಾಗಿ, ನೀವು ನಿತ್ಯವೂ ನಿಮ್ಮ ಕೌಶಲಗಳನ್ನು ಹೇಗೆ ಶಾರ್ಪ್ ಮಾಡಿಕೊಳ್ಳುತ್ತಾ ಹೋಗುತ್ತೀರಿ ಎನ್ನುವುದು ಮುಖ್ಯವಾಗುತ್ತದೆ. ಪ್ರತೀ ದಿನ ನಿಮ್ಮ ಕೌಶಲವನ್ನು ವೃದ್ಧಿಸುವಂತಹ ಸಾಧ್ಯತೆಗಳನ್ನು ಅನ್ವೇಷಣೆ ಮಾಡಿ, ಆಗ ಹೊಸ ಹೊಸ ಅವಕಾಶಗಳು ನಿಮ್ಮೆದುರು ತೆರೆದುಕೊಳ್ಳುತ್ತಾ ಹೋಗುತ್ತವೆ. ನಿಂತ ನೀರಾಗಬೇಡಿ. ನಿಂತ ನೀರು ಕಲುಷಿತವಾಗುತ್ತದೆ.

**ರಾಮಾ ಅಟೋಮೊಬೈಲ್ಸ್**


ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ




**PRAVEEN KUMAR ADYAPADY**
NOTARY & ADVOCATE
MANGALORE OFFICE
JANVI PLAZA, IInd FLOOR
BUNTS HOSTEL, MANGALORE
BAJPE OFFICE
OZANAM COMPLEX, IInd FLOOR
CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
We undertakes : Civil, Criminal, Motor Vehicles, A.C., D.C. Cases, Land Conversion, Registration etc.

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)


# 'ಜಾನಪದ ಲೋಕ ಪ್ರಶಸ್ತಿ'



ಕರ್ನಾಟಕ ಜಾನಪದ ಪರಿಷತ್ ನೀಡುವ ಜಾನಪದ ಲೋಕ ಪ್ರಶಸ್ತಿಗೆ ಈ ಬಾರಿ ಕಾಸರಗೋಡಿನ ಜಾನಪದ ಕಲಾವಿದ, ಯಕ್ಷಗಾನ ಪೋಷಕ ಪ್ರೊ॥ ಎ. ಶ್ರೀನಾಥ ಅವರು ಆಯ್ಕೆಯಾಗಿದ್ದಾರೆ. ಜಾನಪದ ಕಲೆಯ ಉಳಿವಿಗೆ ನೀಡಿದ ಸೇವೆಯನ್ನು, ಜಾನಪದ ಕ್ಷೇತ್ರದ ಜೀವಮಾನದ ಸಾಧನೆಯನ್ನು ಪರಿಗಣಿಸಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಾ. 12ರಿಂದ 14ರ ವರೆಗೆ ಬೆಂಗಳೂರು ರಾಮನಗರದಲ್ಲಿರುವ ಜಾನಪದ ಲೋಕದಲ್ಲಿ ಪ್ರವಾಸಿ ಜಾನಪದ ಲೋಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

### ಕುಮಾರಿ ನಮನಾ ಬಿ.ಕೆ. ಇವರಿಗೆ ಮಾನ್ಯ ಮುಖ್ಯಮಂತ್ರಿಗಳಿಂದ

# 'ಕೆಳದಿ ಚೆನ್ನಮ್ಮ ರಾಜ್ಯ ಶೌರ್ಯ ಪ್ರಶಸ್ತಿ'



ಮಾನ್ಯ ರಾಜ್ಯಪಾಲರಿಂದ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಕೊಡಲ್ಪಡುವ ಘನತೆಯ ಶೌರ್ಯ ಪ್ರಶಸ್ತಿಯು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಯಡಿಯೂರಪ್ಪ, ಉಪಮುಖ್ಯಮಂತ್ರಿಗಳಾದ ಶ್ರೀಯುತ ಗೋವಿಂದ ಕಾರಜೋಳ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಮಂತ್ರಿಗಳಾದ ಶಶಿಕಲಾ ಜೊಲ್ಲೆಯವರ ಉಪಸ್ಥಿತಿಯಲ್ಲಿ ನೆರವೇರಲ್ಪಟ್ಟಿತು. ಪ್ರತಿಷ್ಠಿತ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ಪ್ರದಾನ ಮಾಡುವ ಈ ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ ಬಾರಕೂರಿನ ಚೌಳಿಕೆರೆಯ ಶ್ರೀಯುತ ಕುಮಾರಸ್ವಾಮಿ ಬಿ. ಆರ್. ಮತ್ತು ಶ್ರೀಮತಿ ಸವಿತಾ ಎರ್ಮಾಳ್ ಇವರ ಪುತ್ರಿಯಾದ ಕುಮಾರಿ ನಮನಾ ಬಿ. ಕೆ. ಇವರಿಗೆ 'ಕೆಳದಿ ಚೆನ್ನಮ್ಮ ರಾಜ್ಯ ಶೌರ್ಯ ಪ್ರಶಸ್ತಿ'ಯನ್ನು ಅರಮನೆ ಮೈದಾನದ ಭವ್ಯ ವೇದಿಕೆಯಲ್ಲಿ ಗಣ್ಯರು ಪ್ರದಾನ ಮಾಡಿದರು. ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯು ಪ್ರಶಸ್ತಿಪತ್ರ, ನಗದು ಬಹುಮಾನಗಳನ್ನೊಳಗೊಂಡಿದೆ. ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಪುರಸ್ಕಾರ ಪಡೆದ ಕುಮಾರಿ ನಮನಾ ಬಿ. ಕೆ. ಬ್ರಹ್ಮಾವರ ಲಿಟಲ್ ರಾಕ್ ಇಂಡಿಯನ್ ಸ್ಕೂಲ್‌ನ ಹತ್ತನೇ ತರಗತಿಯ ವಿದ್ಯಾರ್ಥಿನಿ. ಇವರು ಬ್ರಹ್ಮಾವರದ ಸರಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿ ಹಾಗೂ ಎನ್.ಎಸ್.ಎಸ್.ನ ಮಂಗಳೂರು ವಿಭಾಗದ ವಿಭಾಗಾಧಿಕಾರಿಯವರಾದ ಮತ್ತು ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ ಬಾರ್ಕೂರು, ಮಂದಾರ್ತಿ, ಬ್ರಹ್ಮಾವರ ತಾಲೂಕು ಇದರ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಸವಿತಾ ಎರ್ಮಾಳ್ ಹಾಗೂ ಉದ್ಯಮಿ ಶ್ರೀ ಕುಮಾರಸ್ವಾಮಿ ಬಿ. ಆರ್. ಇವರ ಏಕಮಾತ್ರ ಪುತ್ರಿಯಾಗಿದ್ದಾರೆ.

# ಉಪಮೇಯರ್‌ಗೆ ಅಭಿನಂದನೆ




ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಮಂಗಳೂರು ಮಹಾನಗರ ಪಾಲಿಕೆ ನೂತನ ಉಪಮೇಯರ್ ಶ್ರೀಮತಿ ಸುಮಂಗಲಾ ರಾವ್‌ರವರನ್ನು ಸಭಾದ ಸಭಾಂಗಣದಲ್ಲಿ ಸನ್ಮಾನಿಸಲಾಯಿತು. ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿಗಳಾದ ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಚೇತನ್ ಶರ್ಮ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಯುವ ವೇದಿಕೆಯ ಶ್ರೀ ಮನೀಶ್ ರಾವ್, ಶ್ರೀ ಸುರೇಶ್ ಕಡಬ, ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾ ಶ್ರೀನಿವಾಸ್, ನಿರ್ದೇಶಕರುಗಳು, ಸದಸ್ಯರು ಉಪಸ್ಥಿತರಿದ್ದರು.

**ಚಿತ್ರ : ಶ್ರೀ ರಘುವೀರ್ ಪೆರ್ಡೂರು**

# ಶತಾಯುಷಿಗೆ ಸನ್ಮಾನ



ಸೋಮವಾರ ದಿನಾಂಕ 15–03–2021ರಂದು ನಮ್ಮ ಸಮಾಜದ ಹಿರಿಯರಾದ ತಾಳೆಪ್ಪಾಡಿ ರಾಮಚಂದ್ರಯ್ಯರವರು ತಮ್ಮ ಶತವರ್ಷ ಪೂರೈಸಿದ ಸವಿನೆನಪಿಗಾಗಿ ಅಂದೇ ಸಂಜೆ ಪಡೀಲಿನ ಅವರ ನಿವಾಸಕ್ಕೆ ತೆರಳಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಮಂಗಳೂರು ಮಹಾನಗರ ಪಾಲಿಕೆ ಉಪಮೇಯರ್ ಶ್ರೀಮತಿ ಸುಮಂಗಲಾ ರಾವ್‌ರವರ ಉಪಸ್ಥಿತಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಉಪಾಧ್ಯಕ್ಷ ಡಾ. ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಯುವವೇದಿಕೆ ಅಧ್ಯಕ್ಷ ಶ್ರೀ ಮನೀಶ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್‌ಕುಮಾರ್, ಉಪಾಧ್ಯಕ್ಷೆ ಶ್ರೀಮತಿ ಸ್ನೇಹಲತಾ ದಿವಾಕರ್, ಕಾರ್ಯದರ್ಶಿ ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್ ಹಾಗೂ ಸಭಾದ ಸದಸ್ಯರು ಸೇರಿ ರಾಯರಿಗೆ ಪೇಟಾ ತೊಡಿಸಿ, ಶಾಲು–ಹಾರ, ಫಲ–ಪುಷ್ಪಗಳೊಂದಿಗೆ ಬೆಳ್ಳಿಯವರು ತಯಾರಿಸಿದ ರಾಗಿ ಹಾಲ್‌ಬಾಯಿ ಕಟ್ ಮಾಡಿಸಿದಾಗ ಮಹಿಳಾ ವೇದಿಕೆ ಸದಸ್ಯರು 'ಜನ್ಮದಿನ ಮಿದಂ ಆಯಿ ಪ್ರಿಯ ಪಖೇ ಶಂತನೋತುತೇ ಸರ್ವದಾ ಮುದಮ್' ಸಂಸ್ಕೃತ ಶ್ಲೋಕವನ್ನು ಹಾಡುವ ಮೂಲಕ ವಿಶಿಷ್ಟ ರೀತಿಯಲ್ಲಿ ಶ್ರೀ ರಾಮಚಂದ್ರ ರಾಯರ 100ನೇ ವರ್ಷದ ಹುಟ್ಟುಹಬ್ಬವನ್ನು ಮನೆಯವರೆಲ್ಲರ ಸಮ್ಮುಖದಲ್ಲಿ ಆಚರಿಸಲಾಯಿತು.

**✆ : 9739155359** **ವರದಿ : ಶ್ರೀ ಪುಷ್ಪಾವತಿ ಶ್ರೀನಿವಾಸ್**

*Prop. : P. Srikanth Rao* Mobile : 9343361618

**M/s. SAMARPAN**

***HOUSE OF STATIONERY***

**"Vijaya Nivas", Opp. Pio Mall**
**Bejai Church Road, Mangalore - 4**



ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

# ವೆಂಕಟೇಶ್ ರಾವ್ ಕಾರಿಂಜ ಜಲವರ್ಣ ಇವರ ಪ್ರೀತಿಯ ಮಾಧ್ಯಮ

ಇವರ ರಚನೆಯಲ್ಲಿ ಸಾಮಾನ್ಯವಾಗಿ ನಿಸರ್ಗದಲ್ಲಿ ಕಾಣುವ ವಿಭಿನ್ನ ರೀತಿಯ ಸೆಳೆತವನ್ನು, ಬಣ್ಣಗಳ ಓಕುಳಿಯನ್ನು ಗಮನಿಸಬಹುದು. ಈ ನಿಸರ್ಗವೆಂದರೆ ಬಣ್ಣಗಳ ಮೆರೆವಣಿಗೆ ಎಂಬ ವಿಚಾರವನ್ನು ಇವರ ಕಲಾಕೃತಿಗಳಲ್ಲಿ ಕಾಣಬಹುದು. ಸಾಮಾನ್ಯ ಎನಿಸುವ ನಿಸರ್ಗ ದೃಶ್ಯದಲ್ಲಿ ಇವರಿಗೆ ನಾನಾ ರೀತಿಯ ಬಣ್ಣಗಳ ವಿನ್ಯಾಸ, ಒನಪು ಕಾಣಿಸುತ್ತದೆ. ಅವನ್ನು ಗುರುತಿಸಿ, ಆ ದೃಶ್ಯಕ್ಕೊಂದು ಕಲಾಕೃತಿಯ ಚೌಕಟ್ಟನ್ನು ಕೊಡುವ ಇವರ ಕೌಶಲ ಬೆರಗು ಹುಟ್ಟಿಸುತ್ತದೆ.





ಇವರು ರಚಿಸಿದ ಒಂದಕ್ಕಿಂತ ಒಂದು ಆಕರ್ಷಣೀಯವಾದ ಕಲಾಕೃತಿಗಳು ನೋಡಿದವರನ್ನು ಒಂದು ಕ್ಷಣ ಭಾವ ಪರವಶರನ್ನಾಗಿಸುತ್ತದೆ. ಇವರ ಕಲಾಕೃತಿಗಳಲ್ಲಿ ಸಾಮಾನ್ಯವಾಗಿ ಮನೆಯ ಮುಂದಿನ ಹೊಲಗದ್ದೆಗಳು, ಮಳೆಯ ನೀರು ಹರಿದು ಹೋಗುವ ತೊರೆ, ಮಂಜು ಮುಸುಕಿದ ಬೆಟ್ಟಗಳು, ಗದ್ದೆಯಲ್ಲಿ ಹಸಿರಿನ ನರ್ತನ ಹಕ್ಕಿಗಳು, ಆಕಾಶದಲ್ಲಿ ಹಾರಿ ಹೋಗುವ ದೃಶ್ಯ, ಸೂರ್ಯೋದಯ, ಸೂರ್ಯಾಸ್ತ, ಮೋಡ ಮುಸುಕಿದ ವಾತಾವರಣ, ಮಂದವಾದ ಗಾಳಿ ಬೀಸಿದಾಗ ಕಾಣುವ ದೃಶ್ಯ, ತೋಟಗಳಲ್ಲಿ ಕೆಲಸ ಮಾಡುವ ಶ್ರಮಜೀವಿಗಳು, ಸೂರ್ಯ ರಶ್ಮಿಯ ಸ್ಪರ್ಶದ ದೃಶ್ಯಕಾವ್ಯ, ವರ್ಣ ವೈವಿಧ್ಯ ಮಯ ಹೂಗಳು, ಅವುಗಳ ಮೇಲೆ ಪಾತರಗಿತ್ತಿ ಹಾರಾಟ ಹೀಗೆ ಪ್ರಕೃತಿಯ ನಾನಾವಿಧದ ಮನಮೋಹಕ ದೃಶ್ಯಗಳು ಇವರ ಕುಂಚದಲ್ಲಿ ಸೆರೆಯಾಗಿದೆ.

ವೆಂಕಟೇಶ ರಾವ್‌ರವರು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಹವ್ಯಾಸಿ ಕಲಾವಿದರಾಗಿ ಚಿತ್ರ ರಚಿಸಲು ಆರಂಭಿಸಿದ ಇವರು ಇಂದು ನುರಿತ ಕಲಾವಿದರಾಗಿ ಬೆಳೆದಿರುವುದಕ್ಕೆ ಅವರ ಅಪಾರವಾದ ಆಸಕ್ತಿ ಪರಿಶ್ರಮವೇ ಕಾರಣ. ಮತ್ತೊಂದು ವಿಶೇಷವೆಂದರೆ ವಾರಾಂತ್ಯದ ಬಿಡುವಿನ ಸಮಯದಲ್ಲಿ ಲಾಲ್‌ಬಾಗ್, ಕಬ್ಬನ್‌ಪಾರ್ಕ್, ಚಿತ್ರಕಲಾ ಪರಿಷತ್, ವೆಂಕಟಪ್ಪ ಕಲಾಗ್ಯಾಲರಿ ಹೀಗೆ ವಿವಿಧ ಪ್ರದೇಶಗಳಿಗೆಲ್ಲ ಭೇಟಿ ನೀಡಿ ಅಲ್ಲಿಯ ಹತ್ತು ಹಲವಾರು ವಿಷಯಗಳನ್ನು ತಮ್ಮ ಚಿತ್ರಗಳಲ್ಲಿ ತರುತ್ತಾರೆ.



ಬೆಂಗಳೂರು, ಮಂಗಳೂರು ಮುಂತಾದೆಡೆ ಹಲವು ಬಾರಿ ಏಕವ್ಯಕ್ತಿ ಹಾಗೂ ಇತರ ಕಲಾಪ್ರದರ್ಶನಗಳನ್ನು ನಡೆಸಿದ್ದಾರೆ. ಮಡಿಕೇರಿಯಲ್ಲಿ ಸಾಂಸ್ಕೃತಿಕ ಕಲಾ ಶಿಬಿರ, ಬೆಂಗಳೂರಿನ ರೋರಿಚ್ ಎಸ್ಟೇಟ್ ಲ್ಯಾಂಡ್ಸ್ಕೇಪ್ ಆರ್ಟ್ ಕ್ಯಾಂಪ್ ಹಾಗೂ ಲಲಿತಕಲಾ ಅಕಾಡೆಮಿಯ ತಿಂಗಳ ಚಿತ್ರ ಪ್ರದರ್ಶನ ಮತ್ತು ಇನ್ನಿತರ ಚಿತ್ರ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಜಲವರ್ಣ, ಅಕ್ರಲಿಕ್, ತೈಲವರ್ಣ ಬಳಕೆಯಲ್ಲಿ ಪರಿಣತಿ ಪಡೆದಿರುವ ಇವರಿಗೆ ಜಲವರ್ಣದಲ್ಲಿ ಪ್ರಕೃತಿ ಚಿತ್ರವನ್ನು ರಚಿಸುವುದು ಎಂದರೆ ಬಹಳ ಇಷ್ಟ. ಇವರು ಕೆ.ಎಸ್.ಒ.ಯು. ಮೂಲಕ ಎಂ.ಎಫ್.ಎ. ಕಲಾಪದವಿಯನ್ನು ಪಡೆದಿದ್ದಾರೆ. ತಮ್ಮ ವೃತ್ತಿಯ ನಡುವೆಯೂ ಇವರು ಕಲಾ ರಚನೆಗೆ ತೊಡಗಿಕೊಂಡಿರುವುದನ್ನು, ಸುಂದರ ಕಲಾಕೃತಿಗಳನ್ನು ರಚಿಸುವುದನ್ನು ಕಂಡು ಬೆರಗು ಮೂಡುತ್ತದೆ.

# ಸನ್ಮಾನ



ಮಂಗಳೂರಿನ ನೂತನ ಉಪಮೇಯರ್ ಆಗಿ ಆಯ್ಕೆಯಾದ ನಮ್ಮ ಸಮಾಜದ ಶ್ರೀಮತಿ ಸುಮಂಗಲಾ ರಾವ್ ಅವರನ್ನು ಮಾಂಟ್ರಾಡಿ ಶ್ರೀ ಚಂದ್ರಶೇಖರ್ ರಾವ್ ಮತ್ತು ಶ್ರೀಮತಿ ಮನೋಹರಿ ರಾವ್‌ರವರ ಸ್ವಗೃಹದಲ್ಲಿ ಸಮಾಜ ಬಾಂಧವರ ಸಮ್ಮುಖದಲ್ಲಿ ತಾರೀಕು 21–03–2021ರಂದು ವಿಶೇಷ ಕಾರ್ಯಕ್ರಮದಲ್ಲಿ ದಂಪತಿ ಸಮೇತ ಸನ್ಮಾನಿಸಲಾಯಿತು.

## ಅಭಿನಂದನೆ



ಶ್ರೀಯುತ ಹರೀಶ್ ಕುಮಾರ್ ವಿಟ್ಲ ಇವರು ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಯಿಂದ ಅಧಿಕೃತ ಇಂಜಿನಿಯರ್ ಹುದ್ದೆಗೆ ಬಡ್ತಿ ಹೊಂದಿದ್ದಾರೆ. ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಪ್ರತಿಷ್ಠಾನ, ಬಂಟ್ವಾಳ ಇದರ ಖಜಾಂಚಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸ್ಥಾನಿಕ ಬ್ರಾಹ್ಮಣ ಸಮಾಜದ ಅಭಿವೃದ್ಧಿಗಾಗಿ ಸದಾ ಸಹಕಾರ ನೀಡುತ್ತಿದ್ದು, ಸಮಾಜಮುಖಿ ಸೇವೆಯಲ್ಲಿ ನಿರತರಾಗಿದ್ದಾರೆ.

## ಸನ್ಮಾನ



ಉಡುಪಿ ಜಿಲ್ಲೆಯ ಶಿಕ್ಷಕ ಶ್ರೀ ಸತ್ಯನಾರಾಯಣ ಹೆಬ್ಬಾರರನ್ನು ಶಿಕ್ಷಕ ವೃತ್ತಿಯಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಯನ್ನು ಗುರುತಿಸಿ ದಾವಣಗೆರೆಯಲ್ಲಿ ನಡೆದ "ಶಿಕ್ಷಣ ಜ್ಞಾನ" ಪತ್ರಿಕೆಯ 18ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.



## ಜೇಡ

ಬಲೆಯಲ್ಲಿ ಸೆರೆಯಾಗುವ ಮಿಕಗಳನ್ನು ಬಂಧಿಸಿ ನಿಶ್ಚಲವಾಗಿಸಲು ಜೇಡಗಳು ಬೇರೊಂದು ಬಗೆಯ ದಾರವನ್ನು ಬಳಸುತ್ತವೆ. ಅಂತಹದೇ ಗಟ್ಟಿ ದಾರದ ಪೊಟ್ಟಣಗಳನ್ನು ನಿರ್ಮಿಸಿ ಅವುಗಳೊಳಗೆ ತಮ್ಮ ಮೊಟ್ಟೆ ಮರಿಗಳನ್ನು ಸುರಕ್ಷಿತವಾಗಿ ಇರಿಸುತ್ತವೆ. ಶತ್ರುಗಳಿಂದ ತಪ್ಪಿಸಿಕೊಳ್ಳಲು ಕೂಡ ಜೇಡಗಳು ತಮ್ಮ ರೇಷ್ಮೆಯನ್ನೇ ಬಳಸುತ್ತವೆ. ಕೆಳಕ್ಕೆ ಧುಮುಕಲು ಮತ್ತು ಕ್ಷಿಪ್ರವಾಗಿ ದೂರ ಹೋಗಲು ತಮ್ಮದೇ ರೇಷ್ಮೆಯ ಹಗ್ಗದ ಒಂದು ತುದಿ ಹಿಡಿದು ತೇಲಿ ಸಾಗುತ್ತವೆ. ಯಾವುದೇ ಕಾರಣದಿಂದ ದೀರ್ಘಕಾಲ ಆಹಾರ ಅಲಭ್ಯವಾದಾಗಲೂ ಜೇಡಗಳು ತಮ್ಮ ಅಥವಾ ತಮ್ಮ ಸನಿಹದ ಇತರ ಜೇಡಗಳ ಬಲೆಗಳ ರೇಷ್ಮೆಯನ್ನೇ ಆಹಾರವಾಗಿ ಸೇವಿಸಿ ಜೀವ ಉಳಿಸಿಕೊಳ್ಳುತ್ತವೆ.


ಪತ್ರಿಕೆಗೆ ಶುಭ ಬಯಸುವ–

ಶ್ರೀ ಸೋಮಶೇಖರನ್
ಮತ್ತು
ಶ್ರೀಮತಿ ಅರುಣಾ ಸೋಮಶೇಖರನ್
ಚಿಲಿಂಬಿ, ಮಂಗಳೂರು

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works

ಪತ್ರಿಕೆಗೆ ಶುಭ ಬಯಸುವ–

ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–

ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
ಪ್ರಮೋದ್ ಟವರ್ಸ್, ಮಂಗಳೂರು

# ಶ್ರೀ ಶಂಕರ ಪ್ರತಿಷ್ಠಾನ (ರಿ.)

**ಪ್ರಸಾದ ಭವನ, ಅನಂತಶಯನ, ತೆಳ್ಳಾರು ರಸ್ತೆ, ಕಾರ್ಕಳ - 574 104**




ಶಂಕರ ಪ್ರತಿಷ್ಠಾನ ಕಾರ್ಕಳದಲ್ಲಿ ಶಿವರಾತ್ರಿ ಮಹೋತ್ಸವವು ಶ್ರೀ ಸತೀಶ ಭಟ್ ಇವರ ಪೌರೋಹಿತ್ಯದಲ್ಲಿ ನಮ್ಮ ಸಮಾಜ ಬಾಂಧವರ ಸಹಯೋಗದೊಂದಿಗೆ ಶ್ರದ್ಧಾಭಕ್ತಿಯಿಂದ, ಪ್ರಸಾದ ಭವನ, ತೆಳ್ಳಾರು ರಸ್ತೆಯಲ್ಲಿ ತಾ. 11–03–2021ರ ಗುರುವಾರ ಆಚರಿಸಲಾಯಿತು. ಅಧ್ಯಕ್ಷರಾದ ಶ್ರೀ ಕೇಶವ ರಾವ್ ದಂಪತಿಗಳು ಕುಕ್ಕುಂದೂರು, ಕಾರ್ಯದರ್ಶಿ ಶ್ರೀ ಹರಿಶ್ಚಂದ್ರ ರಾವ್ ಕರ್ವಾಲ, ಶ್ರೀ ಕೋದಂಡರಾಮ, ಶ್ರೀ ಕೃತಿವಾಸ ಶರ್ಮಾ, ಶ್ರೀ ರಾಜಶೇಖರ ಕುಕ್ಕುಂದೂರು ಹಾಗೂ ಶ್ರೀ ಭವಾನಿಶಂಕರ ದಂಪತಿಗಳು ಪೂಜಾ ಕಾರ್ಯದಲ್ಲಿ ಸಹಕರಿಸಿದರು.

ಶ್ರೀ ರತ್ನಾಕರ್ ರಾವ್ ದಂಪತಿಗಳು ಗುಡ್ಡೆ ಅಂಗಡಿ, ಕಾರ್ಕಳ ಇವರು ಉಪಾಹಾರದ ಪ್ರಾಯೋಜಕತ್ವ ವಹಿಸಿದ್ದರು. ಮಹಿಳಾ ತಂಡದ ಸದಸ್ಯರು ಭಜನಾ ಕಾರ್ಯಕ್ರಮ ನೆರವೇರಿಸಿದರು. ಸುಮಾರು 60 ಜನ ಸಮಾಜ ಬಾಂಧವರು ಭಾಗವಹಿಸಿದ್ದರು.

ಶ್ರೀಮತಿ ಸಾವಿತ್ರಿ ಮನೋಹರ್, ಶ್ರೀ ಮುರಳೀಧರ ಶರ್ಮಾ, ಶ್ರೀ ರಾಜಶೇಖರ ಕುಕ್ಕುಂದೂರು, ಶ್ರೀ ಅರವಿಂದ ರಾವ್ ಕಲ್ಯ, ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು, ಶ್ರೀ ವಿಜಯ ಕುಮಾರ್ ಪರಪ್ಪು ಇವರು ಉಪಸ್ಥಿತರಿದ್ದರು. ಶ್ರೀ ರವಿಪ್ರಕಾಶ್ ಕಾರ್ಕಳ ಸಹಕಾರವಿತ್ತರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದ ವಿತರಣೆಯೊಂದಿಗೆ ವಂದನಾರ್ಪಣೆ ಸಲ್ಲಿಸಲಾಯಿತು.

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




ಪರ್ಕಳದ **ಇನ್ನ ರಾಮಚಂದ್ರ ರಾವ್** (75) ತಾರೀಕು 28–03–2021ನೇ ರವಿವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಇವರು ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



**ಚೇರ ನಟ್ಟೋಜ ಮಡಿಲ್ ರಾಮ ರಾವ್** (84)ರವರು ತಾರೀಕು 7–3–2021ನೇ ರವಿವಾರ ಪುತ್ತೂರಿನಲ್ಲಿ ನಿಧನ ಹೊಂದಿದರು. ಇವರು ಪತ್ನಿ, ಮೂವರು ಪುತ್ರರು, ಒರ್ವ ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

❖ ❖ ❖



**ಬಾರಕೂರು ಕೊರಟಗೆರೆ ಶ್ರೀ ಚಂದ್ರಶೇಖರ ರಾವ್** (80) ತಾ. 10–3–2021ನೇ ಬುಧವಾರ ಬಾರ್ಕೂರ್‌ನಲ್ಲಿ ನಿಧನ ಹೊಂದಿದರು. ಇವರು ಪತ್ನಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

Muralidhara Rao Adyapadi
Proprietor
Mob : 94480 27259
99803 16434

SPANDANA
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಕೆ. ಲಕ್ಷ್ಮೀನಾರಾಯಣ ಶರ್ಮ
ಅತಿಕಾರಬೈಲು, ಪಗ್ಗ
✆ : 9448043969
8861497325
ಶಿವಗಿರಿ ಎಂಟರ್‌ಪ್ರೈಸಸ್
SHIVAGIRI ENTERPRISES


ಪತ್ರಿಕೆಗೆ ಶುಭ ಬಯಸುವ–
ಶ್ರೀ ಕಾಂತಾವರ ಜಯಪ್ರಕಾಶ್
ಮತ್ತು ಶ್ರೀಲತಾ ಹಾಗೂ
ತನ್ವಿ, ನಿವೇದ, ಧೃತಿ ಮತ್ತು ಧ್ರುವ್

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
N. LAXMI PRASAD
ಕಾರ್ಯಕಾರಿಣಿ ಮಂಡಳಿ ಸದಸ್ಯರು
D.K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳ ಬೆಳಗಲಿ!
ಶುಭಾಶಯಗಳೊಂದಿಗೆ –
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

Prop. : Kishore Kumar Kedige
Ph. : 2231524
M. : 9880726325
KYADIGE AUTOMOBILES
Opp. to D. P. Stores Main Road, B. C. Road, Bantwal Tq.
Dealers in : 2 & 3 WHEELERS SPARES

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
ರವಿಕಿರಣ್ ಕ್ರೊಲ, ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

# ಮಾಡಿದ್ದುಣ್ಣೋ ಮಹಾರಾಯ

"ಮಾಡಿದ್ದುಣ್ಣೋ ಮಹಾರಾಯ" ಎಂಬ ಗಾದೆಯನ್ನು ದಿನನಿತ್ಯದ ವ್ಯವಹಾರದಲ್ಲಿ ಲೀಲಾಜಾಲವಾಗಿ ಬಳಸುತ್ತಲೇ ಇರುತ್ತೇವೆ ಇದೊಂದು ಅನುಭವಾಧಾರಿತ ಗಾದೆ.

ಭಾರತೀಯರಾದ ನಾವು ಪುನರ್‌ಜನ್ಮ, ಕರ್ಮ ಸಿದ್ಧಾಂತ ತತ್ತ್ವಗಳನ್ನು ನಂಬಿದವರು ಪ್ರತಿ ಜೀವಿಯೂ ಆಯಾ ಜನ್ಮದಲ್ಲಿ ಮಾಡಿದ ಪಾಪ, ಪುಣ್ಯ ಕರ್ಮಗಳಿಗೆ ತಕ್ಕ ಫಲವನ್ನು ಆ ಜೀವಿ ಅದೇ ಜನ್ಮದಲ್ಲಿಯೋ, ಮುಂದಿನ ಜನ್ಮದಲ್ಲಿಯೋ ತಾನೇ ಅನುಭವಿಸಬೇಕು ಎಂಬುದರಲ್ಲಿ ಸಂಶಯವಿಲ್ಲ. ಪಾಪದಲ್ಲಿ 'ಜ್ಞಾನತಃ ಅಜ್ಞಾನತಃ ಕಾಮತಃ ಅಕಾಮತಃ ಸಕೃತ ಕೃತಾನಾಂ, ಅಸಕೃತ್ ಕೃತಾನಾಂ' ಎಂಬ ವಿಧಿಗಳಿವೆ. ಈ ಜನ್ಮ ಜನ್ಮಾಂತರದ ಬಾಲ್ಯ ಕೌಮಾರ್ಯ ಯೌವನ ವೃದ್ಧಾಪ್ಯಗಳಾದ ಚತುರಾಶ್ರಮಗಳಲ್ಲಿ. ಅರಿತೋ, ಅರಿಯದೆಯೋ, ಉದ್ದೇಶಪೂರ್ವಕವಾಗಿಯೋ, ಉದ್ದೇಶವಿಲ್ಲದೆಯೋ ಪಾಪ, ಪುಣ್ಯಗಳನ್ನು ಮಾಡುತ್ತಲೇ ಇರುತ್ತೇವೆ. ಈ ಕರ್ಮಗಳಿಗೆ ತಕ್ಕ ಫಲವನ್ನೂ ನಾವು ಅನುಭವಿಸಲೇಬೇಕು. 'ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ / ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ' (ಗರುಡ ಪುರಾಣ) ಎಂಬ ವಾಕ್ಯ ದಂತೆ ಕರ್ಮಫಲವನ್ನು ಕರ್ತೃವು ಅನುಭವಿಸಿಯೇ ಮುಗಿಸಬೇಕು. ನೂರು ಕೋಟಿ ಕಲ್ಪಗಳಾದರೂ ಅವನು ಅನುಭವಿಸದೆ ಅದು ಕರಗುವುದಿಲ್ಲ ಕರ್ಮ, ಕರ್ಮಫಲಕ್ಕೆ ಅರ್ಥವೇನಾದರೂ ಇದೆಯೇ ಎಂಬ ಬಗ್ಗೆ 'ಬ್ರಹ್ಮಾ ಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೋದರೇ, ವಿಷ್ಣುರ್ಯೇನ ದಶಾವತಾರ ಗ್ರಹನೇ ಕ್ಷಿಪ್ತೋ ಮಹಾ ಸಂಕಟೇ। ರುದ್ರೋ ಯೇನ ಕಪಾಲಪಾಣೀಪುಟಕೇ ಭಿಕ್ಷಾಟನಂ ಕಾರಿತಃ ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ' ಎಂಬ ನೀತಿಶತಕದಲ್ಲಿರುವ ಸುಭಾಷಿತವನ್ನು ಗಮನಿಸಬೇಕು.

ಬ್ರಹ್ಮಾಂಡದಲ್ಲಿ ಒಬ್ಬ ಕುಂಬಾರನಂತೆ, ಸಕಲ ಜೀವಿಗಳನ್ನೂ ಸೃಷ್ಟಿಸುತ್ತಿರುವ ಕೆಲಸವನ್ನು ಬ್ರಹ್ಮನು ತನ್ನ ಕರ್ಮಫಲದ ಕಾರಣ ಮಾಡುತ್ತಿರುವನು. ದಶಾವತಾರಗಳನ್ನು ಎತ್ತಿ, ಪ್ರತಿ ಅವತಾರದಲ್ಲೂ ನಾನಾ ಕಷ್ಟಗಳನ್ನು ಅನುಭವಿಸಿದ್ದು ಶ್ರೀ ಮಹಾವಿಷ್ಣುವಿನ ಕರ್ಮಫಲ. ಕೈಯಲ್ಲಿ ತಲೆಬುರುಡೆ ಹಿಡಿದು ಭಿಕ್ಷಾಟನೆಯಿಂದ ಜೀವಿಸುವುದು ಈಶ್ವರನ ಕರ್ಮಫಲ. ಇದೇ ರೀತಿ, ಆಕಾಶದಲ್ಲಿ ನಿಗದಿತ ಪಥ, ಅವಧಿಯಲ್ಲಿ ಸುತ್ತುವ ಕಷ್ಟ ಸೂರ್ಯನಿಗೆ ಬಂದಿರುವುದು ಸೂರ್ಯನ ಕರ್ಮಫಲ. ಹೀಗೆ, ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಪರಮೇಶ್ವರರೇ ಅವರು ಮಾಡಿದ ಕರ್ಮಕ್ಕೆ ಅವರೇ ಕರ್ಮ ಅನುಭವಿಸುತ್ತಿರುವಾಗ, ಅವರಿಂದ ಸೃಷ್ಟಿಸಲ್ಪಟ್ಟ ಮನುಷ್ಯರಾದ ನಾವು ನಮ್ಮ ಕರ್ಮ ಫಲದಿಂದ ತಪ್ಪಿಸಿಕೊಳ್ಳಲಾದೀತೇ? ಈ ಜನ್ಮದಲ್ಲಿ ಮಾಡಿದ ಕರ್ಮಕ್ಕೆ ಇದೇ ಜನ್ಮದಲ್ಲಿಯೇ ಕರ್ಮಫಲ ಅನುಭವಿಸುತ್ತಿರುವ ಅದೆಷ್ಟೋ ಉದಾಹರಣೆಗಳನ್ನು ನಾವೆಲ್ಲಾ ಕಂಡಿದ್ದೇವೆ. ಆದ್ದರಿಂದ 'ಮಾಡಿದ್ದುಣ್ಣೋ ಮಹಾರಾಯ' ಎಂಬುದು ಕೇವಲ ಗಾದೆ ಎನ್ನದೆ ಅದು ಸರ್ವಕಾಲಿಕ ಸತ್ಯ ಎಂಬುದನ್ನು ನಾವು ನೆನಪಿಡಬೇಕು.

ಕರ್ಮಫಲ ಹೇಗೆ ಕರ್ಮ ಮಾಡಿದವನನ್ನೇ ಹುಡುಕಿಕೊಂಡು ಬರುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಎಂದರೆ ಹಾಲನ್ನು ಕರೆದ ಕೂಡಲೇ ಅದು ಹೇಗೆ ಹುಳಿಯಾಗುವುದಿಲ್ಲವೋ ಹಾಗೆಯೇ, ಒಂದು ಕೆಟ್ಟ ಕೆಲಸ ಮಾಡಿದ ಕೂಡಲೇ ಅದರ ಪರಿಣಾಮ ಗೊತ್ತಾಗುವುದಿಲ್ಲ. ಆದರೆ, ಅದು ಒಳಗೆ ಹೊಗೆಯಾಡುತ್ತಿದ್ದು ಕರ್ತೃವನ್ನು ಅನುಸರಿಸಿಕೊಂಡು ಬರುತ್ತದೆ, ಕಣ್ಣಿಗೆ ಕಾಣದ ಬೂದಿ ಮುಚ್ಚಿದ ಕೆಂಡದಂತೆ ಎಂದಿದ್ದಾನೆ ಭಗವಾನ್ ಬುದ್ಧ.

ಇಂತಹುದೇ ಮತ್ತೊಂದು ಸಾಧಾರಣ ಉದಾಹರಣೆಯೆಂದರೆ, ಹಲವಾರು ಹಸುಗಳಿರುವ ಒಂದು ದೊಡ್ಡ ಮಂದೆಯಲ್ಲಿ ಕರುವೊಂದು ತನ್ನ ತಾಯಿ ಯಾರೆಂದು ಗುರುತಿಸಿ ಅದರ ಹಿಂದೆಯೇ ಹೋಗುವಂತೆ ಕರ್ಮ ಕೆಲಸ ಮಾಡಿದವನನ್ನೇ ಹುಡುಕಿ ಕೊಂಡು ಬಂದು ಸೇರುತ್ತದೆ.

ಇದೇ ವಿಷಯದಲ್ಲಿ ವೇದಗಳು ಏನು ಹೇಳುತ್ತವೆ ಎಂಬುದನ್ನು ತಿಳಿಯೋಣ. ನಮ್ಮೆಲ್ಲರ ಅಂತರಂಗದಲ್ಲೂ ಒಂದೊಂದು ಪಾತ್ರೆಯಿರುತ್ತದೆ. ಜನ್ಮಕಾಲದಲ್ಲೇ ನಮ್ಮ ಅಂತರಂಗದಲ್ಲಿ ಇರುವ ಪಾತ್ರೆಯಲ್ಲಿ ನಾವು ಮಾಡುವ ಪ್ರತಿ ಪಾಪ, ಪುಣ್ಯಕರ್ಮಗಳ ಲೆಕ್ಕ ದಾಖಲಾಗುವ ವ್ಯವಸ್ಥೆ ಇದೆ. ನಮ್ಮ ಜೀವಿತಾವಧಿಯಲ್ಲಿ ನಮ್ಮ ಇಂದ್ರಿಯಗಳನ್ನು ಬಳಸಿ, ಏನೇನು ಚಿಂತಿಸುತ್ತೇವೆ, ಕೇಳುವ, ನೋಡುವ ಇತ್ಯಾದಿ ಚಟುವಟಿಕೆಗಳೆಲ್ಲವೂ ಸಂಸ್ಕಾರ ರೂಪದಲ್ಲಿ ಅಂತರಂಗದಲ್ಲಿ ಮುದ್ರಿತವಾಗುತ್ತಿರುತ್ತವೆ. ನಮ್ಮ ಮುಂದಿನ ಚಿಂತನೆಗಳು, ಕರ್ಮಗಳು, ಈ ಸಂಸ್ಕಾರಗಳಿಂದ ಪ್ರೇರಿತವಾಗುತ್ತವೆ. ಅಂದರೆ, ದುಷ್ಟ ಸಂಸ್ಕಾರಗಳಿಂದ ಮತ್ತೆ ದುಷ್ಕಾರ್ಯಗಳು, ಮತ್ತೆ ದುಷ್ಟಸಂಸ್ಕಾರ. ಸತ್‌ಸಂಸ್ಕಾರಗಳಿಂದ ಸತ್ಕಾರ್ಯಗಳು ಎಂಬ ಅಡುಗೆ; ಕರ್ಮಫಲ ಸಿದ್ಧವಾಗಿ, ಇವು ಕರ್ತೃವನ್ನೇ ಹುಡುಕಿ, ಅವನಿಗೆ ಅಡುಗೆ ಬಡಿಸಿ ಫಲ ನೀಡುತ್ತದೆ. ತಾ ಮಾಡಿದ ಅಡುಗೆಯನ್ನು ತಾನೇ ಭುಂಜಿಸದೆ ತಪ್ಪದು ಎಂದಿದೆ ಅಥರ್ವ ವೇದದ ಶ್ಲೋಕ ಅರ್ಥಾತ್, 'ಮಾಡಿದ್ದುಣ್ಣೋ ಮಹಾರಾಯ'. ಇದಕ್ಕೆಲ್ಲಾ ಕಾರ್ಯ, ಕಾರಣಗಳ ಸಂಬಂಧವಿದೆ. ಸಂಭವಿಸಿದ ಕಾರ್ಯಕ್ಕೆ, ಘಟನೆಗೆ ಒಂದು ಕಾರಣವಿರಲೇಬೇಕು. ಆ ಕಾರಣದಿಂದ ಆ ಕಾರ್ಯ ಘಟನೆ ನಡೆಯದೇ ತಪ್ಪದು.

ಇದೆಲ್ಲಾ ಹೇಳಿದಾಗ ಸ್ವಾಮಿ, ನೀವೆಲ್ಲೋ ಇದ್ದೀರಿ, ಕೆಟ್ಟ ಕೆಲಸ, ಪಾಪ ಕೃತ್ಯ ಮಾಡಿದವರೆಲ್ಲಾ ಸುಖವಾಗಿಯೇ ಬದುಕುತ್ತಿದ್ದಾರೆ, ಸತ್ಯ, ಧರ್ಮ, ನೀತಿ, ನ್ಯಾಯ ಎಂದ ಸಜ್ಜನರು ಹಿಂದೆಂದೂ ಅನುಭವಿಸದಷ್ಟು ಕಷ್ಟ ಕಾಣುತ್ತಿರುವರು ಎಂಬ ವಾದವನ್ನು ಕೆಲವರು ಮಂಡಿಸಬಹುದು. ಆದರೆ ಇದೊಂದು ದೋಷಪೂರ್ಣ ಅನಿಸಿಕೆ, ಭಾವನೆ ಮಾತ್ರ ದುಷ್ಕೃತ್ಯಗಳಲ್ಲಿ ತೊಡಗಿರುವವರು, ನಾನಾ ಕಾರಣಗಳಿಂದ ಹಲವಾರು ವಿಷಯಗಳಲ್ಲಿ, ಒಳಗೊಳಗೇ ನರಳುತ್ತಿರುತ್ತಾರೆ, ಹೊರಗೆ ತೋರ್ಪಡಿಸದ ರೋಗ, ಮನಸ್ಸಿನ ಅಶಾಂತಿ, ಅಸಮಾಧಾನ, ಕೌಟುಂಬಿಕ ಸಮಸ್ಯೆಗಳಿಂದ ತೊಳಲಾಡುತ್ತಿರುತ್ತಾರೆ. ಸದಾ ಭಯದಲ್ಲೇ ಸಿಲುಕಿ, ಅವರೇ ನಿರ್ಮಿಸಿಕೊಂಡ ಸಿಕ್ಕುಗಳಿಂದ ಬಂಧಿತರಾಗಿ ಅದರಿಂದ ಹೊರಬರಲಾರದೆ ಬಾಧೆ ಪಡುತ್ತಿರುತ್ತಾರೆ. "ಅಧರ್ಮೇಣ್ಯಧತೇ ತಾವತ್ತತೋ ಭದ್ರಾಣಿ ಪಶ್ಯತಿ! ತತಃ ಸಪತ್ನಾಂಜಯತಿ ಸಮೂಲಸ್ತು ವಿನಶ್ಯತಿ" (ಮನು 4. 174). ಅಧರ್ಮ ಕಾರ್ಯಗಳಲ್ಲಿ ತೊಡಗುವವರಿಗೆ ಮೊದಮೊದಲಲ್ಲಿ ಸಂಪತ್ ಸಮೃದ್ಧಿಗಳು ಉಂಟಾಗಬಹುದು, ಶತ್ರುಗಳನ್ನು ಜಯಿಸಬಹುದು. ಇದರಿಂದ ತಾನು ಅಭ್ಯುದಯ ಹೊಂದುತ್ತಿದ್ದೇವೆ ಎಂದು ಭಾಸವಾಗುತ್ತದೆ. ಆಮೇಲೆ ಸರ್ವನಾಶವಾಗಿ ಹೇಳ ಹೆಸರಿಲ್ಲದಂತಾಗುತ್ತಾರೆ ಎಂಬ ಸಾರ್ವಕಾಲಿಕ ಸತ್ಯವನ್ನು ಸಾರಿದೆ, ಮನುಸ್ಮೃತಿಯ ಈ ಶ್ಲೋಕ, ಈ ದಿಸೆಯಲ್ಲಿ ಸತ್ಯಮೇವ ಜಯತೇ, ಧರ್ಮೋ ರಕ್ಷತಿ ರಕ್ಷಿತಃ ಎಂಬ ವಾಕ್ಯಗಳು ನಮ್ಮನ್ನು ಎಚ್ಚರಿಸುತ್ತವೆ.

ಮಾಡಿದ ಕರ್ಮಕ್ಕೆ ತಕ್ಕ ಫಲವನ್ನು ಕರ್ತೃಗಳೇ ಅನುಭವಿಸಿದ ಹಲವಾರು ಪ್ರಕರಣಗಳು ಪುರಾಣ ಗ್ರಂಥಗಳಲ್ಲೂ ನಮಗೆ ಕಾಣಸಿಗುತ್ತವೆ. ಈ ಪೈಕಿ ಕೆಲವು ಮುಖ್ಯವಾದ ಪ್ರಸಂಗಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬ್ರಹ್ಮ ಮಾನಸಪುತ್ರರಾದ ಸನಕ, ಸನಂದರು ಶ್ರೀಮನ್ನಾರಾಯಣನ ದರ್ಶನಕ್ಕಾಗಿ ವೈಕುಂಠಕ್ಕೆ ತೆರಳಿದರು, ಆ ಋಷಿಕುಮಾರರ ವೇಷ–ಭಾಷೆಗಳನ್ನು ಕಂಡ ದ್ವಾರಪಾಲಕರಾದ ಜಯ–ವಿಜಯರು, ಅವರನ್ನು ಬಾಗಿಲಲ್ಲೇ ತಡೆದು, ಭಗವಂತನ ದರ್ಶನಕ್ಕೆ ಇದು ಸಕಾಲವಲ್ಲ ಎಂದು ಅಡ್ಡಿಪಡಿಸಿ ಒಳಗೆ ಹೋಗಲು ಅವಕಾಶ ನೀಡಲಿಲ್ಲ. ಅಷ್ಟೇ ಸಾಲದೆಂಬಂತೆ ಅವರನ್ನು ಹಾಸ್ಯಮಾಡಿ ಅವಮಾನಪಡಿಸಿದರು. ಪರಿಣಾಮವಾಗಿ, ತೀವ್ರವಾಗಿ ಮುನಿಸಿಕೊಂಡ ಆ ಋಷಿಕುಮಾರರು, ದ್ವಾರಪಾಲಕರನ್ನು ಕುರಿತು, ನೀವು ಭಗವಂತನ ಸಾಮೀಪ್ಯವಿದ್ದರೂ ನಿಮ್ಮ ಬುದ್ಧಿಯು ಶುದ್ಧವಾಗಿಲ್ಲ. ಭಗವಂತನ ದರ್ಶನಕ್ಕೆ ಬಂದ ನಮ್ಮನ್ನು ಅಡ್ಡಿಪಡಿಸಿ, ಅವಮಾನಿಸಿದ್ದಕ್ಕಾಗಿ ದೈತ್ಯ ಯೋನಿಯಲ್ಲಿ ಜನಿಸುವಂತೆ ಶಾಪವಿತ್ತರು. ಆ ಶಾಪದ ಕಾರಣವೇ, ಜಯ–ವಿಜಯರು ಮುಂದೆ ಮೂರು ಜನ್ಮಗಳಲ್ಲಿ ಶ್ರೀ ಹರಿಯ ಶತ್ರುಗಳಾಗಿ, ದೈತ್ಯಕುಲದಲ್ಲಿ ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣರಾಗಿ ಜನಿಸಿ, ಅವರ ದುಷ್ಕೃತ್ಯಗಳಿಗೆ, ಮಾಡಿದ್ದುಣ್ಣೋ ಮಹರಾಯ ಎಂಬಂತೆ ತಕ್ಕ ಫಲವನ್ನು ಅನುಭವಿಸಿದರು.

ಇದೇ ರೀತಿ ದಕ್ಷನು ಪ್ರಜಾಪತಿಯಾಗಿ ಅಧಿಕಾರ ವಹಿಸಿಕೊಂಡ ಸಂದರ್ಭ ಬಳಸಿ, ದೊಡ್ಡ ಯಜ್ಞವನ್ನು ಏರ್ಪಡಿಸಿದ್ದ. ಅದಕ್ಕಾಗಿ ಆಹ್ವಾನವೀಯುವಾಗ, ಈಶ್ವರನನ್ನು ಹೊರತುಪಡಿಸಿ ಉಳಿದೆಲ್ಲರನ್ನೂ ಆಹ್ವಾನಿಸಿದ. ತನ್ನ ತಂದೆ ತನಗೆ, ಪತಿಗೆ ಆಹ್ವಾನ ನೀಡದಿದ್ದರೂ, ತವರಿನ ಅಭಿಮಾನದ ಕಾರಣ, ಸತಿದೇವಿಯು, ಪತಿಯ ಹಿತೋಪದೇಶವನ್ನು ನಿರ್ಲಕ್ಷಿಸಿ ದಕ್ಷನ ಯಜ್ಞ ಮಂಟಪಕ್ಕೆ ಹಾಜರಾಗಿ, ಕರೆಯದೇ ಬಂದದ್ದಕ್ಕಾಗಿ ಅಲ್ಲಿದ್ದ ದಕ್ಷನೇ ಮೊದಲಾದವರಿಂದ ಅವಮಾನಿತಳಾದಳು. ಸಾಧ್ವಿಯೂ, ತನ್ನ ಮಗಳೂ, ಶಿವನ ಪತ್ನಿಯೂ ಆದವಳನ್ನು ಅವಮಾನಿಸಿದ ಪರಿಣಾಮವಾಗಿ ಶಿವದೂತರಿಂದ ದಕ್ಷನು ಧ್ವಂಸವಾದನು. ಹೀಗೆ ತನ್ನ ದುಷ್ಕೃತ್ಯಕ್ಕೆ ತಕ್ಕ ಫಲವನ್ನು ಅನುಭವಿಸಿದನು.

ಗಾಂಧಾರಿಯ ನೂರು ಮಂದಿ ತಮ್ಮಂದಿರನ್ನೂ ದುರ್ಯೋಧನನು ಅನ್ನಾಹಾರಗಳಿಲ್ಲದೆ ಸೆರೆಯಲ್ಲಿಟ್ಟು ಕೊಲೆ ಮಾಡಿದ್ದಕ್ಕಾಗಿ ಹಾಗೂ ಸತ್ಯ, ಧರ್ಮನಿರತರೂ, ಸ್ವಂತ ತಮ್ಮಂದಿರೇ ಆದ ಪಾಂಡವರಿಗೆ ನ್ಯಾಯಯುತವಾಗಿ ಸಿಗಬೇಕಿದ್ದ ರಾಜ್ಯವನ್ನು ಕೊಡದೆ ಅವರನ್ನು ನಾಶಪಡಿಸಲು ಮಾಡಿದ ಸರ್ವ ಪ್ರಯತ್ನಗಳ ಪರಿಣಾಮವಾಗಿ ದುರ್ಯೋಧನನು ಕುಲಸಮೇತ ನಾಶವಾದನು. ಒಬ್ಬರಿಗೆ ಕೆಡುಕು ಉಂಟುಮಾಡಿದರೆ, ಹಾಗೆ ಮಾಡಿದವರೇ ಕೇಡಿಗೆ ಗುರಿಯಾಗಿ ನಿರ್ಮೂಲವಾಗುತ್ತಾರೆ. ಮಾಡಿದ್ದುಣ್ಣೋ ಮಹಾರಾಯ ಎಂಬ ಸತ್ಯ ಇಲ್ಲಿ ಸ್ಪಷ್ಟವಾಗುತ್ತದೆ.

ಭಗವಂತನನ್ನು ನಿಂದಿಸಿ, ಜನರಿಗೆ ಕಿರುಕುಳ ನೀಡುತ್ತಿದ್ದ ದುಷ್ಟರಾದ ಜರಾಸಂಧ, ಶಿಶುಪಾಲರು ತಮ್ಮ ದುಷ್ಕಾರ್ಯಗಳಿಂದಲೇ ಹತರಾದರು. ಋಷಿ ಪತ್ನಿಯಾಗಿದ್ದ ಅಹಲ್ಯೆಯ ಮೇಲೆ ಕೆಟ್ಟ ನೋಟ ಬೀರಿದ ಕಾರಣ ದೇವೇಂದ್ರನು ಗೌತಮ ಮಹರ್ಷಿಗಳಿಂದ ಶಾಪಗ್ರಸ್ತನಾದ, ಅಗಸ್ತ್ಯರನು ಅವಮಾನಿಸಿದ್ದಕ್ಕಾಗಿ ನಹುಷನು ಸರ್ಪವಾಗಬೇಕಾಯಿತು. ಸೀತಾದೇವಿಯನ್ನು ಅಪಹರಿಸಿದ್ದಕ್ಕಾಗಿ ರಾವಣನು ಶ್ರೀರಾಮನಿಂದ ಹತನಾದನು.

ಈ ಎಲ್ಲಾ ಹಿಂದಿನ ಉದಾಹರಣೆಗಳನ್ನು ಕೇಳಿದ ಮೇಲಾದರೂ, ದುಷ್ಕರ್ಮಗಳನ್ನು ಮಾಡಿದರೆ ದುಷ್ಫಲ, ಸತ್ಕಾರ್ಯಗಳನ್ನು ಮಾಡಿದರೆ ಸತ್ಫಲ ದೊರಕುವುದು ಖಚಿತವೆಂಬ ಸಾರ್ವಕಾಲಿಕ ಸತ್ಯವನ್ನು ಸದಾ ನೆನಪಿಟ್ಟುಕೊಂಡು, ಶ್ರೇಷ್ಠ ಮಾನವ ಜನ್ಮ ಪಡೆದ ನಾವು ದುರ್ಜನರಾಗದೆ, ಸ್ವಾರ್ಥ, ದುರಾಸೆ, ಮೋಸ, ವಂಚನೆ ಮುಂತಾದವುಗಳಿಂದ ದೂರವಾಗೋಣ, ಸಜ್ಜನರಾಗಿ, ಮಾನವರಾಗಿ ಬಾಳೋಣ, ನಮಗೆ ವಹಿಸಲ್ಪಟ್ಟ ಕರ್ತವ್ಯಗಳನ್ನು ಶ್ರದ್ಧೆ–ನಿಷ್ಠೆಗಳಿಂದ ನಿರ್ವಹಿಸೋಣ. ಅರಿಷಡ್ವರ್ಗಗಳ ದಾಸರಾಗದೆ, ಇಂದ್ರಿಯಗಳನ್ನು ನಿಯಂತ್ರಿಸಿ ಅಸುರೀ ಗುಣಗಳನ್ನು ತ್ಯಜಿಸಿ, ದೈವೀ ಗುಣಗಳನ್ನು ಬೆಳೆಸಿಕೊಂಡು, "ನಾವೂ ಬದುಕಿ, ಇತರರೂ ಬದುಕಲು ಅವಕಾಶ ನೀಡೋಣ. ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಘನ ವಾಕ್ಯವನ್ನು ಆದಷ್ಟು ಮಟ್ಟಿಗೆ ಅನುಷ್ಠಾನದಲ್ಲಿರಿಸಿಕೊಂಡು, ಇಹಕ್ಕೂ ಪರಕ್ಕೂ ಒಳಿತಾಗುವಂತೆ ಸಾರ್ಥಕ ಜೀವನ ನಡೆಸೋಣ.

*ಕೃಪೆ : 'ಶ್ರೀ ಶಂಕರ ಕೃಪಾ'*

# ಧಾರವಾಡದ ಸಂಸ್ಕೃತ ಪಾಠಶಾಲೆ ಸಂಸ್ಕೃತ ಜಿಜ್ಞಾಸುಗಳ ಅಕ್ಷಯಪಾತ್ರೆ

ಧಾರವಾಡದ ಸಾಂಸ್ಕೃತಿಕ ಮಹತ್ವದ ಸಂಸ್ಥೆಗಳಲ್ಲಿ 'ಸಂಸ್ಕೃತ ಪಾಠಶಾಲೆ'ಯೂ ಒಂದು. ಭಾರತೀಯ ಪರಂಪರೆಯ ಕೊಂಡಿಯಾಗಿ ಗುರುತಿಸಿಕೊಂಡಿರುವ ಈ ಸಂಸ್ಥೆಯು ಕಟ್ಟಡ ವಾಸ್ತುಶಿಲ್ಪದ ಕಾರಣದಿಂದಲೂ ಗಮನಾರ್ಹ. 132 ವರ್ಷಗಳಷ್ಟು ಪುರಾತನವಾದ ಸಂಸ್ಥೆ ಸಂಸ್ಕೃತದ ಜಿಜ್ಞಾಸುಗಳ ಪಾಲಿಗೆ ಅಕ್ಷಯಪಾತ್ರೆಯಂತಿದೆ. ನಮಗಾಗಿ ಚೆಂದದ ಮನೆಯನ್ನು ಬಳುವಳಿಯಾಗಿ ಕೊಟ್ಟ ಹಿರಿಯರನ್ನು ನೆನೆಯುತ್ತೇವಲ್ಲ; ಹಾಗೆಯೇ ಧಾರವಾಡದಲ್ಲಿ ಮುಂಬರುವ ಪೀಳಿಗೆಯು ಎದೆ ತಟ್ಟಿಕೊಂಡು ಇವು ನಮ್ಮೂರಿನಲ್ಲಿವೆ ಎಂದು ಹೆಮ್ಮೆಪಡುವ ಕೆಲವು ಅಪ್ರತಿಮ ಸಂಸ್ಥೆಗಳಿವೆ. ಅಂಥ ಕೆಲವು ಸಂಸ್ಥೆಗಳು ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಕರ್ನಾಟಕ ಕಾಲೇಜು ಗಂಡು ಮಕ್ಕಳ ಟ್ರೈನಿಂಗ್ ಕಾಲೇಜು, ಬೇಂದ್ರೆ ಭವನ, ಮುರುಘಾಮಠ ಮತ್ತು ಸಂಸ್ಕೃತ ಪಾಠಶಾಲೆ.

ಸದ್ದುಗದ್ದಲವಿಲ್ಲದೆ ಮೌನದಲ್ಲಿ ಜ್ಞಾನ ಸಮಾರಾಧನೆ ನಡೆಸುತ್ತಿರುವ ಧಾರವಾಡದ ಸಂಸ್ಕೃತ ಪಾಠಶಾಲೆಯು ಒಂದುನೂರ ಮೂವತ್ತೆರಡು ವರ್ಷಗಳಷ್ಟು ಪುರಾತನ ಸಂಸ್ಥೆ! ಐದು ಅಂತಸ್ತಿನ, ವರ್ಣರಂಜಿತವಾದ ಈ ಭವ್ಯ ಕಟ್ಟಡವನ್ನು ಕೆಳಗೆ ನಿಂತು ಮುಗಿಲೆತ್ತರಕ್ಕೆ ಕಣ್ಣೇರಿಸಿ, ಹುಬ್ಬೇರಿಸಿ ನೋಡಿದಾಗ ಕಟ್ಟಡದ ವಿನ್ಯಾಸವು ಯಾರನ್ನಾದರೂ ಬೆರಗುಗೊಳಿಸದೆ ಇರಲಾರದು, ಕಲಾತ್ಮಕ ಚೌಕಟ್ಟುಗಳಿದ್ದ ಕಿಟಕಿ, ಬಾಗಿಲುಗಳೊಳಗೆ ಅಳವಡಿಸಲಾದ ಬಣ್ಣ ಬಣ್ಣದ ಗಾಜಿನ ವಿನ್ಯಾಸಗಳು ನಮ್ಮ ಪೂರ್ವಜರ ಸೌಂದರ್ಯ ಪ್ರಜ್ಞೆಗೆ ಸಾಕ್ಷಿರೂಪದಲ್ಲಿವೆ.

ಊರ ಹೃದಯಭಾಗದಲ್ಲಿ ತಲೆ ಎತ್ತಿ ನಿಂತ ಈ ಕಟ್ಟಡವು ತನ್ನ ಪ್ರತಿಬಿಂಬವನ್ನು ಹಿಂದಿರುವ ಹಾಲಗೆರೆಕೆರೆಯಲ್ಲಿ ಇಣುಕಿ ನೋಡಿಕೊಳ್ಳುತ್ತಾ ನಾಚುತ್ತಿತ್ತು! ಆದರೆ ಈ ಕೆರೆಯ ನೀರನ್ನು ಬತ್ತಿಸಿ ಒಂದು ಸೂಪರ್ ಮಾರ್ಕೆಟ್‌ನ್ನು ನಿರ್ಮಿಸಿದ ಹಿಂದಿನ ಮುನ್ಸಿಪಾಲಿಟಿಯ ಅಧಿಕಾರಿಗಳನ್ನು ಊರಜನರು ಇಂದಿಗೂ ಶಪಿಸುತ್ತಿರುತ್ತಾರೆ. ಊರ ಮಧ್ಯದ ಕೆರೆಯೆಂದರೆ ಆ ಊರಿನ ಕಿರೀಟದಲ್ಲಿದ್ದ ನೀಲ ವಜ್ರದಂತೆ ಮೌಲಿಕವಾದದ್ದು!

ಐದಂತಸ್ತಿನ ಸಂಸ್ಕೃತ ಪಾಠಶಾಲೆಯು ನಿರ್ಮಾಣವಾದಾಗ ಧಾರವಾಡದಲ್ಲಿಯ ಬಹುತೇಕ ಮನೆಗಳಿಗೆ ಎರಡನೆಯ ಅಂತಸ್ತು ಸಹ ಇರಲಿಲ್ಲ. ಆದ್ದರಿಂದ ಈ ಊರಿಗೆ ಬಂದ ಅತಿಥಿಗಳನ್ನು ನಮ್ಮ ಹಿರಿಯರು ಕರೆದೊಯ್ದು ಐದಂತಸ್ತಿನ ಈ ಕಟ್ಟಡವನ್ನು ತೋರಿಸುತ್ತಾ ಹೆಮ್ಮೆಪಡುತ್ತಿದ್ದರು. ಇಂದಿಗೂ ಇದು ಪ್ರೇಕ್ಷಣೀಯ ಕಟ್ಟಡವೇ.

ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಗೆ ಅಡಿಗಲ್ಲು ಇಟ್ಟವರು ಶೃಂಗೇರಿಯ ಪೀಠಾಧೀಶ್ವರ ಶ್ರೀ ಶ್ರೀ ಸಚ್ಚಿದಾನಂದ ಶಿವಾನುಭವ ನೃಸಿಂಹಾಭಾರತೀ ಮಹಾಸ್ವಾಮಿಗಳವರು. ಈ ಸಂಸ್ಥೆಯ ಕನಸನ್ನು ಕಂಡು ಸಾಕಾರಗೊಳಿಸಿದ ಇದರ ಉತ್ಕರ್ಷಕ್ಕೆ ಕಾರಣೀಭೂತರೂ, ಅಪ್ರತಿಮ ಸೇವಾಭಾವದವರೂ ಆಗಿದ್ದ ಚಿರಸ್ಮರಣೀಯರಾದ ಪಾಠಕ್ ಗುರುನಾಥರಾಯರು. ಇವರ ಕನಸು ಕಲ್ಪನೆಯಲ್ಲಿ ಇವರ ಪ್ರೀತಿ, ನಿಷ್ಠೆಗಳ ಜೊತೆ ಇವರ ಪರಿಶ್ರಮದ ಬೆವರಹನಿಗಳು ಬೆರೆತಿವೆ!

1887ರಲ್ಲಿ ಸ್ಥಾಪನೆಗೊಂಡು 1894ರ ಮಾರ್ಚ್ ತಿಂಗಳಲ್ಲಿ 'ದಿ ಸಂಸ್ಕೃತ್ ಲಿಟರರಿ ಸೊಸೈಟಿ' ಎಂಬುದಾಗಿ ಈ ಸಂಸ್ಥೆಯ ಹೆಸರು ಸರ್ಕಾರಿ ಕಡತಗಳಲ್ಲಿ ನೋಂದಾವಣೆ ಗೊಂಡಿತು. ಪಬ್ಲಿಕ್ ಟ್ರಸ್ಟ್ ಆ್ಯಕ್ಟ್ ಪ್ರಕಾರ 1952ರಲ್ಲಿ ರಿಜಿಸ್ಟ್ರೇಶನ್ ಕೂಡ ಆಯಿತು. ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಜ್ಞಾನವನ್ನು ಸಂರಕ್ಷಿಸುತ್ತಾ ಅದನ್ನು ಪಸರಿಸುವ ಉದ್ದೇಶವೇ ಈ ಸಂಸ್ಥೆಯ ಮೂಲಭೂತ ಗುರಿಯಾಗಿದೆ.

ಭಾರತ ದೇಶ ಬ್ರಿಟಿಷರ ಆಳ್ವಿಕೆಗೊಳಗಾಗಿದ್ದ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಉಡುಗೆ-ತೊಡುಗೆಗಳು ನಮ್ಮಲ್ಲೂ ವ್ಯಾಪಕವಾಗಿ ಕಾಣಿಸಿಕೊಂಡವು. ಭಾರತದ ಪರಂಪರೆಯ ಹೊಳಪು ಮಾಸುತ್ತಿದೆ ಎನ್ನುವ ಸಂದರ್ಭದಲ್ಲಿ 'ಬ್ರಹ್ಮ ಸಮಾಜ', 'ಆರ್ಯ ಸಮಾಜ'ಗಳಂತಹ ಸಂಸ್ಥೆಗಳು ಹಾಗೂ ಅನೇಕ ಚಿಂತಕರು 'ಭಾರತೀಯ ಚಿಂತನ ಪರಂಪರೆ'ಗಳ ಪುನರುತ್ಥಾನಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಆ ಪರಂಪರೆಯ ಭಾಗವಾಗಿ ಜನ್ಮವೆತ್ತಿದ ಸಂಸ್ಥೆ ಧಾರವಾಡದ ಸಂಸ್ಕೃತ ಪಾಠಶಾಲೆ. ಅದ್ವೈತ ತತ್ತ್ವ ಸಿದ್ಧಾಂತಗಳ ಹರಿಕಾರರಾದ ಶ್ರೀಮದ್ ಆದಿಶಂಕರರ ತತ್ತ್ವ ಪ್ರಣಾಲಿಗಳ ಅಧ್ಯಯನದ ವ್ಯವಸ್ಥೆಯು ಇಲ್ಲಿದೆ. ವೇದ, ಉಪನಿಷತ್ತು, ರಾಮಾಯಾಣ, ಮಹಾಭಾರತ ಮಹಾಕಾವ್ಯಗಳು ಮತ್ತು ಭಾರತೀಯ ಶಾಸ್ತ್ರಾಧ್ಯಯನಗಳು ಇಲ್ಲಿ ಬೆಳಗು ಬೈಗಿನಲ್ಲಿ ನಿರಂತರವಾಗಿ ನಡೆಯಲು ಕಾರಣೀಭೂತರಾದವರು ಸಂಸ್ಕೃತ ಭಾಷಾತಜ್ಞರು, ಶಾಸ್ತ್ರಗಳ ಪಂಡಿತರು ಮತ್ತು ಈ ಊರಿನ ಉದಾರ ದಾನಿಗಳು.

ಸಂಸ್ಕೃತ ಪಾಠಶಾಲೆ 1951ರಲ್ಲಿ ತನ್ನ ವಜ್ರಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿಕೊಂಡಿತು. ಈಗಾಗಲೇ ತಿಳಿಸಿದಂತೆ ಈ ಪಾಠಶಾಲೆಯ ಸಂಸ್ಥಾಪಕರಲ್ಲಿ ಅಗ್ರಗಣ್ಯ ರಾದ ಪಾಠಕ್ ಗುರುನಾಥರಾಯರು ಒಂದೊಂದು ರೂಪಾಯಿಯನ್ನು ಸಾರ್ವಜನಿಕ ರಿಂದ ಬೇಡಿ ಸಂಗ್ರಹಿಸಿ ಪಟ್ಟ ಕಷ್ಟಗಳ ಕತೆಯು ಕೇಳುಗರ ಕಣ್ಣುಗಳನ್ನು ತೇವಗೊಳಿಸುತ್ತದೆ. ಈ ಕಟ್ಟಡವು ನಿರ್ಮಾಣವಾಗುತ್ತಿರುವ ಹಂತದಲ್ಲಿ ತಮ್ಮ ಸ್ವಂತ ಮನೆಯಲ್ಲಿ ಮತ್ತು ಅತವಲೆ ಪಾಂಡುರಂಗರಾಯರ ಮನೆಯಲ್ಲಿ ವಿದ್ಯಾರ್ಥಿಗಳನ್ನು ಇರಿಸಿಕೊಂಡು ಪೋಷಿಸಿದ ಕ್ರಮವು ಪ್ರಶಂಸನೀಯ.

ಪಾಠಶಾಲೆಯ ಕಟ್ಟಡಕ್ಕಾಗಿ ಬೇಕಾದ ಭೂಮಿಯನ್ನು ದಾನವಾಗಿ ಕೊಟ್ಟ ಉದಾರಿಗಳು ಲೋಖಂಡೆ ಶ್ರೀಪಾದರಾಯರು. ಕಟ್ಟಡ ಕಾಮಗಾರಿಯ ಸುದೀರ್ಘ ಅವಧಿಯಲ್ಲಿ ಹಗಲು ರಾತ್ರಿ ನಿಂತುಕೊಂಡು ಮೇಲ್ವಿಚಾರಣೆ ಮಾಡುತ್ತಿದ್ದವರು ಮಾತ್ರಾರೂ ಆಗಿರದ ಪಾಠಕ್ ಗುರುನಾಥರಾಯರೇ ಆಗಿದ್ದರು.



ಪಾಠಶಾಲೆಯ ಮೊದಲ ಅಂತಸ್ತಿನಲ್ಲಿ ನ್ಯಾಯ, ವ್ಯಾಕರಣಾದಿ, ಪ್ರೌಢಶಾಸ್ತ್ರಗಳ ಅಧ್ಯಾಪನವು ನಡೆದರೆ, ಎರಡನೆಯ ಅಂತಸ್ತಿನಲ್ಲಿ ಕಾವ್ಯ, ನಾಟಕ ಮತ್ತು ಅಲಂಕಾರ ಶಾಸ್ತ್ರಗಳಂತಹ ಸಾಹಿತ್ಯದ ಅಧ್ಯಯನವು ನಡೆಯುತ್ತದೆ. ಈ ಮಹಡಿಯಲ್ಲಿ ಪುರಾಣ ಪಠಣ, ಪ್ರವಚನ ಮತ್ತು ಸಾರ್ವಜನಿಕ ಉತ್ಸವಗಳು ನಡೆಯುತ್ತವೆ. ಮೂರನೇ ಅಂತಸ್ತಿನಲ್ಲಿ ವೇದಾಧ್ಯಯನ ಮತ್ತು ನಾಲ್ಕನೇ ಮಹಡಿಯಲ್ಲಿ ವೇದಾಂತಾಧ್ಯಯನಗಳು ನಡೆಯುತ್ತವೆ. ಇಂತಹ ಎತ್ತರದ ಕಟ್ಟಡವು ನಿರ್ಮಾಣವಾಗಿ ವಿದ್ಯಾರ್ಥಿಗಳ ಪ್ರವೇಶವಾದಾಗ ಅನೇಕರು ಆಕ್ಷೇಪವನ್ನು ಮಾಡಿದ್ದುಂಟು. ಬಂದವರು ಹದಿನೈದು-ಇಪ್ಪತ್ತು ವಿದ್ಯಾರ್ಥಿಗಳು. ಇಷ್ಟು ಕಡಿಮೆ ಮಂದಿಗೆ ಇಷ್ಟೆಲ್ಲಾ ವೆಚ್ಚ ಮಾಡಿ, ಶ್ರಮವಹಿಸಿ ಕಟ್ಟಿಸಿದ ಈ ದೊಡ್ಡ ಕಟ್ಟಡದ ಅಗತ್ಯವಿತ್ತೇ? ಎಂದು ಗೊಣಗಿದವರು ಕೆಲವರು. ಆದರೆ ಕನಸುಗಾರರಿಗೆ ಆ ದಿನದ ಚಿಂತೆಯಷ್ಟೇ ಇರುವುದಿಲ್ಲ. ಮುಂಬರುವ ಪರಿವರ್ತನೆಗಳಿಗೆ ಅವಕಾಶ ಮಾಡಿಕೊಡುವ ಅಗತ್ಯದ ಪರಿಕಲ್ಪನೆಯು ಇರುತ್ತದೆ.

ಸಂಸ್ಕೃತ ಪಾಠಶಾಲೆಗೆ ಬರುವ ತರುಣ ವಿದ್ಯಾರ್ಥಿಗಳು ಹೆಚ್ಚಾಗಿ ಬಡವರಿರುತ್ತಾರೆ, ಗ್ರಾಮೀಣ ಪ್ರದೇಶದವರಿರುತ್ತಾರೆ, ಅವರ ಊಟ, ವಸತಿಗಾಗಿ ಪ್ರತ್ಯೇಕ ಕಟ್ಟಡದ ವ್ಯವಸ್ಥೆಯನ್ನು ಗಾಂಧಿ ಚೌಕಿನ ಹತ್ತಿರವಿದ್ದ ಕೆರೆ ಕೆಳಗಿನ ಓಣಿಯಲ್ಲಿಯ ಒಂದು ಕಟ್ಟಡದಲ್ಲಿ ಮಾಡಲಾಯಿತು. ಆ ವಿದ್ಯಾರ್ಥಿಗಳ ಪಾಲನೆ-ಪೋಷಣೆಯನ್ನು ಇಂದಿಗೂ ನೋಡಿಕೊಳ್ಳುತ್ತಿರುವವರು ಧಾರವಾಡದಲ್ಲಿ ವಾಸವಾಗಿದ್ದ ಅನೇಕ ಶ್ರೀಮಂತರು ಮತ್ತು ವ್ಯಾಪಾರಸ್ಥರು.

2019-2020ನೇ ಸಾಲಿನ ಪಾಠಶಾಲೆಯ ವರದಿಯ ಪ್ರಕಾರ ಮೊದಲಿನ ಗುರುಕುಲ ಪದ್ಧತಿಯೇ ಇಂದಿಗೂ ಮುಂದುವರೆದಿದೆ. ಈಗಿರುವ ವಿದ್ಯಾರ್ಥಿಗಳ ಸಂಖ್ಯೆಯು ಕೇವಲ 12 ಮಾತ್ರ. ಇಲ್ಲಿ ಪಠ್ಯಪುಸ್ತಕ ರಚನೆ, ಪರೀಕ್ಷಾ ಪದ್ಧತಿಗಳು ಮೊದಲಿನಂತಿವೆ. ಪಾಠಶಾಲೆಯ ಎರಡನೇ ಅಂತಸ್ತಿನಲ್ಲಿ 'ಶ್ರೀ ವಿದ್ಯಾರಾಮಚಂದ್ರ ಸಭಾಭವನ'ದಲ್ಲಿ ಆಗಾಗ ಸಾರ್ವಜನಿಕರಿಗಾಗಿ ವೇದೋಪನಿಷತ್ತು, ವ್ಯಾಖ್ಯಾನ ಮಾಲೆಗಳು, ಪ್ರಸ್ಥಾನತ್ರಯ ಮತ್ತು ಪಾಠ ಪ್ರವಚನಗಳೂ ವರ್ಷವಿಡೀ ನಡೆಯುತ್ತಿವೆ. ಸಾರ್ವಜನಿಕರಿಗಾಗಿ ಪ್ರವಚನಗಳಿಗೆ ಶ್ರೋತೃಗಳಾಗಿ ಬಂದಾಗ ಪಾಠಶಾಲೆಗೆ ಹೆಚ್ಚಿನ ಜೀವಕಳೆ ತುಂಬುತ್ತದೆ.

ಉಪಜೀವಿಕೆಗಾಗಿಯೇ ನಿರ್ಮಾಣಗೊಂಡ ಇಂದಿನ ಬಹುತೇಕ ವಿದ್ಯಾಲಯಗಳಲ್ಲಿ ತುಂಬಿತುಳುಕುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಲೆಯಲ್ಲಿಟ್ಟುಕೊಂಡು ನೋಡಿದಾಗ ಈ ಪಾಠಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ನಿರಾಸೆಯನ್ನು ಹುಟ್ಟಿಸುತ್ತದೆ. ಇಲ್ಲಿ ಅಧ್ಯಯನ ಪೂರೈಸಿದ ವಿದ್ಯಾರ್ಥಿಗಳು ದೇಶದ ಅನೇಕ ಮಠಮಾನ್ಯಗಳಲ್ಲಿ ಸಂಸ್ಕೃತ ಭಾಷೆ, ಪುರಾಣ, ಶಾಸ್ತ್ರಾದಿಗಳನ್ನು ಕಲಿಸುವ ಗುರುಗಳಾಗುತ್ತಾರೆ ಅಥವಾ ಕೆಲವರು ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತದಲ್ಲಿ ಮಾಸ್ಟರ್ ಡಿಗ್ರಿಯನ್ನು ಪಡೆದು ಪ್ರಥಮ ದರ್ಜೆಯ ಕಾಲೇಜುಗಳಲ್ಲಿ ಅಧ್ಯಾಪನ ವೃತ್ತಿಯನ್ನು ಕೈಗೊಂಡಿದ್ದಾರೆ. ಆದರೆ ಪೌರೋಹಿತ್ಯದ ಮೇಲೆ ಉಪಜೀವನ ನಡೆಸುವವರೇ ಬಹುತೇಕ ವಿದ್ಯಾರ್ಥಿಗಳೆಂಬುದು ವಾಸ್ತವದ ಸಂಗತಿ.

ಸಂಸ್ಕೃತ ಭಾಷೆಯನ್ನು ಮತ್ತು ಭಾರತೀಯ ತತ್ತ್ವಜ್ಞಾನದಂತಹ ಉನ್ನತ ವಿದ್ಯೆಯನ್ನು ಕಲಿಯಬೇಕೆಂಬ ಪ್ರೀತಿ ಇಂದಿನ ತರುಣ ಜನಾಂಗದಲ್ಲಿಲ್ಲ. ಎಲ್ಲರೂ ಐ.ಟಿ. / ಬಿ.ಟಿ. ಬೆನ್ನತ್ತಿ ಪರದೇಶಕ್ಕೆ ಹೋಗಬೇಕೆಂಬ ಹಂಬಲದವರೇ. ಇದು ಈ ಸಮಯದ ಕಾಲಧರ್ಮ ಎನ್ನಬಹುದು.

ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡಬೇಕೆಂಬ ಉತ್ಸುಕತೆಯು ಮುಂದಿನ ದಿನಗಳಲ್ಲಿ ಮೂಡೀತು ಎಂಬುದು ನಮ್ಮಲ್ಲಿ ಅನೇಕರ ಕನಸಾಗಿದೆ. ನಮ್ಮ ಹಿರಿಯರು ಧಾರವಾಡದ ಸಂಸ್ಕೃತ ಪಾಠಶಾಲೆಯನ್ನು ಜನರ ಉನ್ನತಿಗಾಗಿಯೇ ಬಿಟ್ಟುಹೋದಂತಹ ಮೌಲಿಕ ಬಳುವಳಿಯಾಗಿದೆ. ಇಲ್ಲಿ ಅವರು ಕಂಡ ಕನಸುಗಳಿವೆ. ಸುರಿಸಿದ ಬೆವರ ಹನಿಗಳಿವೆ. ಹೃದಯದ ಬಡಿತಗಳ ಸದ್ದಿದೆ. ಈ ಪಾಠಶಾಲೆಯ ಸಂರಕ್ಷಣೆ ಮತ್ತು ಇದರ ಅಭಿವೃದ್ಧಿಯು ನಮ್ಮ ಪಾಲಿನ ಕರ್ತವ್ಯ.

*ಕೃಪೆ : 'ಸುಧಾ' ವಾರಪತ್ರಿಕೆ*

Follow us on :

BUILDING DREAMS, ENHANCING LIVES

Experience our Unique Projects at a Prime Localities of Mangalore

27 YEARS OF MILESTONE | Land Trades BUILDERS & DEVELOPERS



Premium Apartments , World Class amenities , Landscaped Garden, CRISIL 7 Star Rated Project

SOLITAIRE
Experience the difference

Hathill , Chilimbi

Club House | High Rise Tower
2,3,4 & 5 BHK Luxury Homes

Affordable Homes at
Derebail , Mangalore

HABITAT ONE 54
An Urban Lifestyle

1 & 2 BHK RESIDENCES
FROM ₹30 LAKHS (All Inclusive)





NEWLY LAUNCHED PROJECT

NAKSHATRA

Gandhinagar ,Mannagudda

G+14 Storey | 50 Exclusive Apartments |
2&3 BHK Premium Homes

Construction : MFAR CONSTRUCTIONS

Developers CRISIL Rating : DA2

8882 777 444
Email :sales@landtrades.in

Corporate Office: Milestone25", 5th Floor, Collectors Gate Junction, Balmatta, Mangalore, Karnataka 575002 | +91 824 2425424, 2423866, 2445840

CREDAI MANGALORE


## ಜ್ಞಾನ – ನುಡಿ

ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ. ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ. – **ಮಾಸ್ತಿ ವೆಂಕಟೇಶ ಅಯ್ಯಂಗಾರ್**

## ಜ್ಞಾನ – ಗಾದೆ

- ನಂಬಿನಾಯನ್ ನಡು ನೀರ್‌ಟ್ ಕೈ ಬುಡಿಯೆರೆ ಬಲ್ಲಿ.
- ನಡತಿನಾತುಂಡು ಸಾದಿ, ಕಲ್ತಿನಾತುಂಡು ವಿದ್ಯೆ .
- ನಡಪೆರೆ ತೀರಂದಿನಾಯಗ್, ತುಂಬೆರೆ ತೀರಂದಿ ಪುದೆ.

## ಜ್ಞಾನ – ನಗೆ

**ಡಾಕ್ಟರ್ :** ನೋಡಯ್ಯಾ ನೀನು ಚೆನ್ನಾಗಿ ವ್ಯಾಯಾಮ ಮಾಡಬೇಕು ಆಗ್ಲೇ ಇಂತಹ ರೋಗಗಳಿಂದ ಪಾರಾಗಬಹುದು.

**ಗುಂಡ :** ಓಹ್... ಬಿಡಿ ಸಾರ್ ನಾನು ಪ್ರತೀ ದಿನ ಕ್ರಿಕೆಟ್ / ಟೆನಿಸ್ / ಫುಟ್‌ಬಾಲ್ ಆಡ್ತಾನೆ ಇರ್ತಿನಿ.

ಡಾಕ್ಟರ್ : ಭೇಷ್ ಕಣಯ್ಯಾ ಪರ್ವಾಗಿಲ್ವೇ ಎಲ್ಲಿ ಆಡ್ತೀಯಪ್ಪ ?

ಗುಂಡ : ನಮ್ ಮನೇಲಿ ಅದೂ ನನ್ನ ಮೊಬೈಲಿನಲ್ಲಿಯೇ!

## ಜ್ಞಾನ – ವಿಸ್ಮಯ

ಇಸ್ರೇಲ್‌ನ ಪ್ಯಾಲೆಸ್ತೀನ್‌ನಲ್ಲಿ ಜಲಾಶಯವೊಂದಿದೆ. ಇದರಲ್ಲಿ ಯಾವುದೇ ಜಲಚರಗಳು ಬದುಕುವುದಿಲ್ಲ. ಇದನ್ನು ಮೃತ ಸಮುದ್ರ ಎಂದು ಕರೆಯಲಾಗುತ್ತಿದೆ. ಜೋರ್ಡಾನ್ ನದಿಯಿಂದ ಅವಿರತವಾಗಿ ಜಲಾಶಯಕ್ಕೆ ನೀರಿನ ಒಳಹರಿವು ಇದ್ದರೂ ಜಲಾಶಯದಿಂದ ಯಾವುದೇ ನೀರಿನ ಹೊರಹರಿವು ಇರುವುದಿಲ್ಲ. ಸಂಪತ್ತಿನ ಸಂಗ್ರಹವೂ ಅಂತೆಯೇ. ಹೊರಹರಿವು ಇಲ್ಲದಾಗ ಅದು ಮೃತ ಸಂಪತ್ತಾಗುತ್ತದೆ. **(Dead Sea)**

Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher : Sri Harsha Kumar Kedige, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*